ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 15 ಏಪ್ರಿಲ್ 12, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಕೇರಳ - ಪ. ಬಂಗಾಲ ಚುನಾವಣೆಯಿಂದ ಕರ್ನಾಟಕಕ್ಕೂ ಲಾಭ

ಕೇರಳ ಮತ್ತು ಪಶ್ಚಿಮ ಬಂಗಾಲಗಳಲ್ಲಿ ವಿಧಾನ ಸಭೆಗೆ ನಡೆದ ಚುನಾವಣೆಗಳ ಫಲಿತಾಂಶದಿಂದ ದೇಶದ ರೈತ-ಕಾರ್ಮಿಕರ ಚಳುವಳಿಗೆ ಹೊಸ ಸ್ಫೂರ್ತಿ ನೀಡಿದಂತಾಗಿದೆ. ಕೇಂದ್ರದ ಜನವಿರೋಧಿ ನೀತಿಯ ವಿರುದ್ಧ, ಭೂಮಾಲಕ-ಬಂಡವಾಳದಾರರ ದಬ್ಬಾಳಿಕೆಗಳ ವಿರುದ್ಧ, ಭಯೋತ್ಪಾದಕರ, ಛಿದ್ರಕಾರಿ ಶಕ್ತಿಗಳ, ಜಾತೀಯ, ಮತೀಯ ಹಾಗೂ ಮೂಲಭೂತವಾದಿಗಳ, ಐಕ್ಯತ ವಿರೋಧಿ, ವೈಜ್ಞಾನಿಕ ತಿಳುವಳಿಕೆಗಳ ವಿರೋಧಿ, ಹಾಗೂ ಮೂಢನಂಬಿಕೆಗಳ ವಿರುದ್ಧ ಹೋರಾಡಲು ಹೊಸ ಸ್ಫೂರ್ತಿ ತುಂಬಿದಂತಾಗಿದೆ.

ಮುಸ್ಲಿಂ ಲೀಗಿನ ಸಹಾಯವಿಲ್ಲದೆ ಕೇರಳದಲ್ಲಿ ಯಾವ ಪಕ್ಷವೂ ಮಂತ್ರಿಮಂಡಲ ರಚಿಸಿ ಆಳಲು ಸಾಧ್ಯವೇ ಇಲ್ಲ. ಕೇರಳದಲ್ಲಿ ಮುಸ್ಲಿಂ ಲೀಗಿನ ನಿರ್ಣಾಯಕ ಸ್ಥಾನದಲ್ಲಿದೆಂದು ಜಂಭ ಕೊಚ್ಚಿಕೊಂಡಿದ್ದರು. ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಅಬ್ದುಲ್ ಸುಲೇಮಾನ್ ಸೇಠ್ 'ಕೇರಳದಲ್ಲಿ ಯಾರೇ ಅಧಿಕಾರ ಮಾಡುವುದಾದರೂ ಅವರ ಮೂಗುದಾರ ನಮ್ಮ ಕೈಯಲ್ಲಿರುವುದು' ಎಂದು ಸೇಠ್ ಹೇಳಿದ್ದುಂಟು. ಕೇರಳದಲ್ಲಿ ಮುಸ್ಲಿಂ ಲೀಗ್ ಇಲ್ಲದೆ ಯಾರಿಗೂ ಅಧಿಕಾರ ಇಲ್ಲ ಎಂಬ ವ್ಯಾಪಕ ಪ್ರಚಾರಕ್ಕೆ ಈ ಸಲದ ಫಲಿತಾಂಶ ಮತ್ತು ಸರ್ಕಾರ ರಚನೆ ಸರಿಯಾದ ಉತ್ತರ ನೀಡಿದ ಮುಸ್ಲಿಂ ಲೀಗನ್ನು ಹೊರತುಪಡಿಸಿ ಮಂತ್ರಿಮಂಡಲ ರಚಿಸಬಲ್ಲೆವು, ಅಧಿಕಾರ ನಡೆಸ

ಎನ್. ಕೆ. ಉಪಾಧ್ಯಾಯ

ಬಲ್ಲೆವು ಎಂಬುದನ್ನು ಸಿ.ಪಿ.ಐ.(ಎಂ) ಹಾಗೆಯೇ ಕೇರಳದ ಜಾತ್ಯಾತೀತ ಮತದಾರರು ತೋರಿಸಿಕೊಟ್ಟಿದ್ದಾರೆ. ಲೀಗಿಗೆ ಹಾಗೆಯೇ ಇತರ ಮತೀಯ ಪಕ್ಷಗಳಿಗೆ, ಜಾತೀಯ ಪಕ್ಷಗಳೊಡನೆ ಚೆನ್ನಾಟವಾಡುತ್ತಿದ್ದ ಇಂದಿರಾ ಕಾಂಗ್ರೆಸ್ಸಿಗೆ ಮತದಾರರು ಸವಾಲು ಒಡ್ಡಿದ್ದಾರೆ. ಜಾತ್ಯಾತೀತತೆಯ ಮಂತ್ರ ಪಠಿಸುತ್ತಾ, ಜಾತೀವಾದಿಗಳಿಗೆ ಪ್ರತ್ಯಕ್ಷವಾಗಿ ಬೆಂಬಲ ನೀಡುತ್ತ ಅವರ ಬೆದರಿಕೆಗಳಿಗೆ ಶರಣಾಗತರಾಗುತ್ತ ಆಡಳಿತೆ ನಡೆಸುತ್ತ ಬಂದಿದ್ದರು ಕರುಣಾಕರನ್.

ಜಾತಿಯನ್ನು ವಿರೋಧಿಸುವ ನೆಪದಲ್ಲಿ ಧರ್ಮಕ್ಕೆ ಧಕ್ಕೆ ಉಂಟುಮಾಡಬಾರದೆಂಬ ದ್ವಿಮುಖ ನೀತಿಯನ್ನನುಸರಿಸುತ್ತ ತಮ್ಮ ಅಧಿಕಾರವನ್ನು ಭದ್ರಗೊಳಿಸುವ ಹೊಂಚಿನಲ್ಲಿದ್ದರು ರಾಜೀವ್‌ಗಾಂಧಿ. ಈ ಎರಡೂ ನಿಲುಮೆಗಳನ್ನು ಕೇರಳದ ಜನತೆ ಧಿಕ್ಕರಿಸಿದ್ದಾರೆ.

ಜಾತೀವಾದಿಗಳ ಕಚ್ಚಾಟ, ಭ್ರಷ್ಟ, ಅಸಮರ್ಪಕ ಆಡಳಿತೆಗೆ ಬೇಸತ್ತು ಕೇರಳದ ಸುಶಿಕ್ಷಿತ ಜನತೆ, ಹಲವಾರು ಹೋರಾಟಗಳಲ್ಲಿ ಪೆಟ್ಟುತಿಂದು ತ್ಯಾಗ ಬಲಿದಾನ ಮಾಡಿದ ರೈತ-ಕಾರ್ಮಿಕರು ಯುವಜನತೆ ಕಾಂಗ್ರೆ ಮುಖಂಡತ್ವದ ಸಂಯುಕ್ತ ಪ್ರಜಾಪ್ರಭುತ್ವ ರಂಗವನ್ನು ಸೋಲಿಸಿತು.

ಕೇರಳದ ರಾಜಕೀಯದಲ್ಲಿ ಆಳವಾಗಿ ಬೇರೂರಿರುವ ಜಾತೀವಾದಿಗಳನ್ನು ಸಂಪೂರ್ಣ ಉಚ್ಚಾಟನೆ ಮಾಡುವ ತನಕ ಕೇರಳದಲ್ಲಿ ಆರೋಗ್ಯಕರ ರಾಜಕೀಯ ಜೀವನ ರೂಪಿಸಲಿಕ್ಕೆ ಜಾತಿ-ಜಾತಿಗಳೊಳಗೆ ಸೌಹಾರ್ದತೆಯನ್ನು ಸ್ಥಾಪಿಸುವುದಕ್ಕೆ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಿಷ್ಟಗೊಳಿಸುವುದಕ್ಕೆ ಸಾಧ್ಯವಿಲ್ಲವೆಂದು, ತಿಳಿದ ಕೇರಳದ ಜನತೆ ಜಾತೀಯ ಪಕ್ಷ ಗುಂಪು, ಶಕ್ತಿಗಳನ್ನೆಲ್ಲ ದೂರ ಇಟ್ಟು ಜಾತ್ಯಾತೀತ ಸಮಾಜ ನಿರ್ಮಾಣಕ್ಕಾಗಿ ಪಣತೊಟ್ಟು ಹೋರಾಡುತ್ತಿರುವ ಸಿ.ಪಿ.ಐ. (ಎಂ) ಮುಖಂಡತ್ವದ ಎಡ ಪ್ರಜಾಪ್ರಭುತ್ವ ರಂಗಕ್ಕೆ ಜಯ ತಂದು ಕೊಟ್ಟಿದೆ. ಜಾತೀವಾದಿಗಳಿಗೂ, ಜಾತೀವಾದಿಗಳನ್ನು ಕಟ್ಟಿಕೊಂಡು ಅಧಿಕಾರ ನಡೆಸುತ್ತೇವೆಂದು ಜಂಭ ಕೊಚ್ಚಿಕೊಳ್ಳುವ ಕಾಂಗ್ರೆಯಂಥ ಪಕ್ಷಗಳಿಗೂ ಒಳ್ಳೆಯ ಪಾಠ ಕಲಿಸಿದಂತಾಗಿದೆ. ಆದರೆ ಜಾತೀವಾದಿಗಳ - ಮೂಲಭೂತವಾದಿಗಳ ಅಪಾಯ ಇನ್ನೂ ಇದೆ. ಅದರ ವಿರುದ್ಧ ನಿರಂತರ ಹೋರಾಟ ಅಗತ್ಯವಿದೆ.

ನೆರೆಕರೆಯ ಕೇರಳ, ದೂರದ ಪಶ್ಚಿಮ ಬಂಗಾಲದಲ್ಲಿ ಸಿ.ಪಿ.ಐ.(ಎಂ) ಮುಖಂಡತ್ವದ ಸರ್ಕಾರಗಳು ಅಧಿಕಾ

(8ನೇ ಪುಟ ನೋಡಿ)

ಅತ್ಯಂತ ಖಂಡನೀಯ

ತಮ್ಮ ಆನಂದ ವಿಕಟನ್ ಪತ್ರಿಕೆಯಲ್ಲಿ ಪ್ರಕಟಿಸಿದ ವ್ಯಂಗಚಿತ್ರದ ಮೂಲಕ ಮಂತ್ರಿಗಳಿಗೂ ಶಾಸಕರಿಗೂ ಅಪಮಾನಗೊಳಿಸಲಾಗಿದೆಂಬ ಆರೋಪದಿಂದ ಸಪ್ತಾಹಿಕದ ಸಂಪಾದಕರಿಗೆ ಮೂರು ತಿಂಗಳ ಶಿಕ್ಷೆ ವಿಧಿಸಿರುವ ತಮಿಳುನಾಡು ವಿಧಾನ ಸಭೆಯ ಕ್ರಮ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹೇರಿದ ಗಧಾ ಪ್ರಹಾರವಾಗಿದೆ. ಅದನ್ನು ಐಕ್ಯರಂಗ ಬಲವಾಗಿ ಖಂಡಿಸುತ್ತದೆ. ಆನಂದ ವಿಕಟನ್ ಪತ್ರಿಕೆಯ ಸಂಪಾದಕರಾದ ಬಾಲಸುಬ್ರಮಣ್ಯಂ ಅವರ ಮೇಲಿನ ಕ್ರಮ ಹಾಗೂ ಬಂಧನದ ವಿರುದ್ಧ ಪ್ರತಿಭಟನೆ ವ್ಯಕ್ತಮಾಡಿದೆ. ತಮಿಳುನಾಡಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಿಧಾನ ಸಭೆಗೆ ಬಹಿಷ್ಕಾರ ಹಾಕಲು ನಿರ್ಧರಿಸಿತ್ತು. ಡಿ.ಎಂ.ಕೆ. ಕೂಡ ಬಹಿಷ್ಕಾರ ಹಾಕಿತ್ತು. ಅಖಿಲ ಭಾರತ ಸಂಪಾದಕರ ಗಿಲ್ಡ ತಮಿಳುನಾಡು ಶಾಸನಸಭೆಯ ಕ್ರಮವನ್ನು ಖಂಡಿಸಿದೆ. ಬಲವಾದ ಪ್ರತಿಭಟನೆಗೆ ಮಣಿದು ವಿಧಾನಸಭೆಯ ಸ್ಪೀಕರ್ ಪಾಂಡ್ಯನ್ ಅವರು ಬಂಧನದಲ್ಲಿದ್ದ ಬಾಲಸುಬ್ರಮಣ್ಯಂ ಅವರ ಬಿಡುಗಡೆಗೆ ಆಜ್ಞೆ ಮಾಡಿದ್ದಾರೆ. ವ್ಯಂಗ ಚಿತ್ರದ ಮೂಲಕ ಮಂತ್ರಿಗಳ—ಶಾಸಕರ ಭ್ರಷ್ಟಾಚಾರವನ್ನು ಬಯಲಿಗೆಳೆದು ಜನಜಾಗ್ರತಿ ಮೂಡಿಸುವುದರಲ್ಲಿ ವಿಕಟನ್ ಸಾಪ್ತಾಹಿಕ ಮಹತ್ವದ ಪಾತ್ರವಹಿಸಿದೆ. ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಈ ಗಧಾಪ್ರಹಾರ ತುರ್ತು ಪರಿಸ್ಥಿತಿಯನ್ನು ನೆನಪಿಸುತ್ತಿದೆ. ಎ.ಐ.ಡಿ.ಎಂ.ಕೆ.-ಕಾಂಗ್ರೆ ಪಕ್ಷಗಳು ತಮ್ಮ ಜನಬೆಂಬಲ ಕುಸಿಯುತ್ತಿರುವಾಗ ಎಂಥ ಕ್ರಮ ಕೈಗೊಳ್ಳಲೂ ಹೇಸುವುದಿಲ್ಲೆಂಬುದನ್ನು ಬಾಲಸುಬ್ರಮಣ್ಯಂ ಅವರ ಬಂಧನವೇ ಸಾಕ್ಷಿ.

ಫೇರ್‌ಫ್ಯಾಕ್ಸ್ ಹಗರಣ

ಬೌದ್ಧಿಕವಾಗಿ ದಿವಾಳಿ ಎದ್ದಿರುವ ರಾಜೀವಗಾಂಧಿ ಸರಕಾರ ಆಡಳಿತ ನಡೆಸುವ ಯೋಗ್ಯತೆಯನ್ನು ಕಳೆದುಕೊಂಡಿದೆಂದು ಲೋಕಸಭೆಯಲ್ಲಿ ಸಿ.ಪಿ.ಐ. [ಎಂ] ಸದಸ್ಯರಾದ ಸೋಮನಾಥ ಚಟರ್ಜಿಯವರು ಆರೋಪಿಸಿದರು. ದೇಶದ ಭದ್ರತೆಗೇನೇ ಅಪಾಯಕಾರಿಯಾದ ಫೇರ್ ಫ್ಯಾಕ್ಸ್ ಗೂಢಚಾರ ಪ್ರಕರಣದ ಕುರಿತು ಚರ್ಚೆಯಲ್ಲಿ ಅವರು ಭಾಗವಹಿಸಿ ಮಾತಾಡುತ್ತಿದ್ದರು.

ಕಳೆದ 8-10 ದಿವಸಗಳಿಂದ ಲೋಕಸಭೆಯಲ್ಲಿ ಪ್ರತಿದಿವಸ ಗೊಂದಲಕ್ಕೂ,ಸರಕಾರದ ಮತ್ತು ಮಂತ್ರಿಗಳ ಸಂಬಂಧವಿಲ್ಲದ ಹೇಳಿಕೆಗಳಿಗೂ, ಪತ್ರಿಕೆಗಳಲ್ಲಿ ಅತಿ ಹೆಚ್ಚಿನ ಪ್ರಚಾರಕ್ಕೂ ಎಡೆಮಾಡಿ ಕೊಟ್ಟಿದೆ ಈ ಗೂಢಚಾರ ಪ್ರಕರಣ.

ಕೆಲವು ಭಾರತೀಯರು 1322 ಕೋಟಿ ರೂಪಾಯಿಯಷ್ಟು ರಹಸ್ಯ ಸಂಪತ್ತನ್ನು ಸ್ವಿಸ್ ಬ್ಯಾಂಕಿನಲ್ಲಿಟ್ಟಿದ್ದಾರೆ. 1985ರ ಒಂದು ವರ್ಷದಲ್ಲೇ 393 ಕೋಟಿ ರೂಪಾಯಿಗಳನ್ನು ಅಲ್ಲಿ ಜಮಾ ಮಾಡಲಾಗಿದೆಂಬ ವರದಿ ಅಂತರಾಷ್ಟ್ರೀಯ ಹಣಕಾಸು ನಿಧಿಯ ಒಂದು ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿತ್ತಂತೆ. ಅದರ ಮಾಹಿತಿ ಪಡೆಯಲು ಹಣಕಾಸು ಖಾತೆ ತನ್ನ ಗೂಢಚರ್ಯೆಗೆ ಹೇಳಿತ್ತಂತೆ. ಅವರು ಅಮೇರಿಕದಲ್ಲಿಯ ಫೇರ್‌ಫ್ಯಾಕ್ಸ್ ಸಂಸ್ಥೆಗೆ ಆ ಜವಾಬ್ದಾರಿಯನ್ನು ಒಪ್ಪಿಸಿದ್ದರಂತೆ. ಅಮೇರಿಕನ್ ಸಾಮ್ರಾಜ್ಯಶಾಹಿ ನಮ್ಮ ದೇಶದ ಭದ್ರತೆ ಮತ್ತು ಐಕ್ಯತೆಯನ್ನು ಬಲಹೀನ ಗೊಳಿಸುವ ಹೊಂಚು ಹೂಡಿದೆಂಬ ಸಂಗತಿ ಗೊತ್ತಿದ್ದೂ, ಅದೇ ದೇಶದ ಗೂಡಾಚಾರ ಸಂಸ್ಥೆಗೆ ಈ ಜವಾಬ್ದಾರಿಯನ್ನು ಒಪ್ಪಿಸಿರುವುದು ಅಪಾಯಕಾರಿ ಎಂದು ಸೋಮನಾಥ ಚಟರ್ಜಿ ಅಕ್ಷೇಪಿಸಿದ್ದಾರೆ. ಫೇರ್‌ಫ್ಯಾಕ್ಸ್ ಸಂಸ್ಥೆಯ ಹಿನ್ನೆಲೆ ಏನು ? ಅಮೇರಿಕಾದ ಗೂಢಚರ್ಯೆ ಸಂಸ್ಥೆಗಳಾದ ಸಿ.ಐ.ಎ., ಎಫ್.ಬಿ.ಐ. ಸಂಸ್ಥೆಗಳೊಡನೆ ಅದರ ಸಂಬಂಧವೇನೆಂಬುದರ ಕುರಿತು ಚೌಕಾಶಿ ನಡೆಸಿಲ್ಲೆಂದೂ, ನಮ್ಮ ದೇಶದ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ಅಂದರೆ ನಮ್ಮ ದೇಶದಲ್ಲೇ ಇರಬೇಕಾಗಿದ್ದ ಕೋಟ್ಯಾವಧಿ ರೂಪಾಯಿ ವಿದೇಶದಲ್ಲಿಡಲಾಗಿದೆಂಬುದರ ಕುರಿತು ವಿಚಾರಣೆ ನಡೆಸಲು ವಿದೇಶಿ ಗೂಢಚರ್ಯೆಯ ಅದರಲ್ಲೂ ಅಮೇರಿಕದ ಸಂಸ್ಥೆಗೆ ಒಪ್ಪಿಸಿರುವುದು ದೇಶಕ್ಕೇನೇ ಅಪಾಯಕಾರಿ ಎಂದು ಸೋಮನಾಥ ಚಟರ್ಜಿ ಹೇಳಿದ್ದಾರೆ.

ಸ್ವತಂತ್ರ ಪಡೆದ ನಲ್ವತ್ತು ವರ್ಷಗಳ ನಂತರವೂ ಕಾನೂನು ಉಲ್ಲಂಘಿಸುವವರ ಕುರಿತು ವಿವರ ಕಂಡುಹಿಡಿಯಲಿಕ್ಕೆ ಸಮರ್ಥ ಗೂಢಚರ್ಯೆ ಸಂಸ್ಥೆ ನಮ್ಮ ದೇಶದಲ್ಲಿಲ್ಲದಿರುವುದು ನಾಚಿಕೆಗೇಡಿತನವಾಗಿದೆ. ಇದು ಅತ್ಯಂತ ಗಂಭೀರ ವಿಷಯ. ದೇಶದ ಜನತೆ ಇದರ ಕುರಿತು ಅನೇಕ ವಿವರಗಳನ್ನು ತಿಳಿಯ ಬಯಸುತ್ತದೆ. ಅವುಗಳಲ್ಲಿ ಮುಖ್ಯ ಗೂಢಚರ್ಯೆ ಸಂಸ್ಥೆಯ ವರದಿ ಬಂದಿದೆಯೇ, ಆ ವರದಿಯಲ್ಲಿ ಏನಿದೆ, ವರದಿಯಲ್ಲಿ ಒಳಗೊಂಡಿರುವ ವ್ಯಕ್ತಿಗಳು ಯಾರು ಎಂಬಿತ್ಯಾದಿ ವಿಷಯಗಳು.

ಇಂಥ ಗಂಭೀರ ಆರೋಪಗಳ ಮೇಲೆ ತೆರೆ ಎಳೆಯಲು ಕೇಂದ್ರ ಸರ್ಕಾರ ಇಬ್ಬರು ಸುಪ್ರೀಂ ಕೋರ್ಟು ನ್ಯಾಯಾಧೀಶರನ್ನೊಳಗೊಂಡ ವಿಚಾರಣಾ ಆಯೋಗವನ್ನು ನೇಮಿಸಿದೆ. ವಿರೋಧ ಪಕ್ಷದವರ ಸಂಸತ್ ಸಮಿತಿ ರಚನೆಯಾಗಬೇಕೆಂಬ ಬೇಡಿಕೆಯನ್ನು ನಿರಾಕರಿಸಲಾಗಿದೆ. ಈ ಆಯೋಗದ ವರದಿಯ ಗತಿ ಅಂಥದ್ದೇ ಪಾಡಾದೀತೆಂದು ತಿಳಿದೇ ವಿರೋಧ ಪಕ್ಷಗಳು ಸಂಸತ್ ಸಮಿತಿ ರಚನೆಗೆ ಒತ್ತಾಯಿಸಿದ್ದರು. ಸತ್ಯ ಸಂಗತಿ ಮುಚ್ಚಿಡುವ ಕೇಂದ್ರ ಸರ್ಕಾರ ಮತ್ತೇನು ಮಾಡೀತು ?

ಹಣ ರೂಪದ ಕೂಲಿ, ಕೃಷಿ ಕಾರ್ಮಿಕರು ಹಾಗೂ ಕನಿಷ್ಠ ಕೂಲಿ

ಜಿ. ಎನ್. ನಾಗರಾಜ್

ಈಗ ಸುಡು ಸುಡು ಬೇಸಿಗೆ. ಗ್ರಾಮೀಣ ಪ್ರದೇಶಗಳಲ್ಲಿ ಸುಗ್ಗಿಯ ದಿನಗಳು ಮುಗಿದು ಹೋಗಿದೆ. ಹೊಲಗಳು ಮಾತ್ರವಲ್ಲ ಗದ್ದೆಗಳೂ ಕೂಡಾ ಬೆಂಗಾಡಿನಂತೆ ಕಾಣುತ್ತಿವೆ. ಕಣ್ಣು ಹರಿದಂತೆಲ್ಲ ಒಣಗುತ್ತಿರುವ ಈ ನೆಲದಲ್ಲಿ ಮರುಭೂಮಿಯಲ್ಲಿ ನೀರಿಗಾಸರೆ ಕಂಡಂತೆ ಅಲ್ಲಿ ಇಲ್ಲಿ ನೀರಾವರಿಯ ಆಶ್ರಯದಲ್ಲಿ ತೋಟಗಳು.

ರೈತರೇನೋ ತಮ್ಮ ಭೂಮಿಯಲ್ಲಿ ಬೆಳೆದ ಧಾನ್ಯವನ್ನು ಉಂಡು ಅಥವಾ ಮಾರಿ ಬದುಕುತ್ತಾರೆ. ಆದರೆ ಕೃಷಿ ಕೂಲಿಕಾರರ ಪರಿಸ್ಥಿತಿ ಏನು ?

ಸ್ವಾತಂತ್ರ್ಯ ನಂತರ ನಮ್ಮ ದೇಶದಲ್ಲಿ ಕೂಲಿಕಾರರ ಸಂಖ್ಯೆ ಒಂದೇ ಸಮನೆ ಏರುತ್ತಲೇ ಇದೆ. ನಿನ್ನೆ ರೈತರಾಗಿದ್ದವರು ಸ್ವಲ್ಪ ಸ್ವಲ್ಪವಾಗಿ ಜಮೀನು ಕಳೆದುಕೊಂಡು ಇಂದು ಕೃಷಿಕೂಲಿಕಾರರಾಗಿದ್ದಾರೆ. ಅಥವಾ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಗೇಣಿಗೆ, ವಾರಕ್ಕೆ ಗುತ್ತಿಗೆಗೆ, ಪಾಲಿಗೆ ಜಮೀನು ಮಾಡುತ್ತಿದ್ದರು. ಭೂಸುಧಾರಣೆ ಕಾನೂನುಗಳ ಫಲವಾಗಿ ಜಮೀನು ಪಡೆದಿರುವುದಕ್ಕಿಂತ ಹೆಚ್ಚಾಗಿ ತಾವು ಗೇಯುತ್ತಿದ್ದ ಚೂರುಪಾರು ಹೊಲಗಳಿಂದ ಹೊರದೂಡಲ್ಪಟ್ಟಿದ್ದಾರೆ. ಇವರೂ ಎಲ್ಲಾ ಕೂಲಿಮಾಡಿ ಹೊಟ್ಟೆಹೊರೆಯುತ್ತಿದ್ದಾರೆ.

ಒಟ್ಟು ಫಲವೇನೆಂದರೆ 1950ರಲ್ಲಿ ಕರ್ನಾಟಕ ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿ ಕೇವಲ ನೂರಕ್ಕೆ ಏಳರಷ್ಟಿದ್ದ ಕೃಷಿಕೂಲಿಕಾರರ ಸಂಖ್ಯೆ ಇಂದು ನೂರಕ್ಕೆ 35ರಷ್ಟಿದ್ದಾರೆ. ಹೀಗೆ ಕೂಲಿಕಾರರ ಪಡೆ ಏರುತ್ತಿದೆ.ಆದರೆ ಕೃಷಿಯ ಕೆಲಸಗಳು ಮಾತ್ರ ಕಡಿಮೆಯಾಗುತ್ತಿದೆ. ವರ್ಷದಲ್ಲಿ ಕೆಲವೇ ದಿನ ದೊರೆಯುವ ಕೂಲಿ.ಅದರಲ್ಲಿಯೇ ಏಗುತ್ತಾ ಬದುಕು ಸಾಗಿಸಬೇಕು.

ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿರುವಂತೆ,ಅವರಿಗೆ ಕೆಲಸದ ಲಭ್ಯತೆ ಕಡಿಮೆಯಾಗುತ್ತಾ ಹೋಗುತ್ತಿದೆ. ಇದಕ್ಕೆ ಒಂದು ಕಡೆ ಭೂಮಿಯನ್ನೇ ಪಾಳು ಬಿಡುವ ಪ್ರವೃತ್ತಿ ಅಥವಾ ನೀಲಗಿರಿ ಸರ್ವೆಮರಗಳಂತಹ ಅತಿ ಕಡಿಮೆ ಕೆಲಸ ಬೇಡುವ ಬಹುವಾರ್ಷಿಕ ಬೆಳೆಗಳನ್ನು ಬೆಳೆಸುವುದು,ಮತ್ತೊಂದು ಕಡೆ ಯಾಂತ್ರೀಕರಣ ಎರಡೂ ಕಾರಣವಾಗಿದೆ. ಜೋಳ, ತೊಗರಿ, ಒಕ್ಕುವ ಯಂತ್ರಗಳು, ಟ್ರಾಕ್ಟರ್‌ಗಳು ಹೀಗೆ ಅನೇಕ ವಿಧಾನಗಳ ಮೂಲಕ ಕೃಷಿ ಕಾರ್ಮಿಕರಿಗೆ ಕೆಲಸ ಇಲ್ಲವಾಗುತ್ತಿದೆ. ಅಪರೂಪಕ್ಕೆ ನಿಧಾನವಾಗಿ ಕಷ್ಟದಿಂದ ಏರುತ್ತಿರುವ ನೀರಾವರಿಯಲ್ಲಿ ಮಾತ್ರ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಕೆಲಸಗಳು ಸಿಗುತ್ತಿರುವುದು. ಇದರ ಪರಿಣಾಮವಾಗಿ ಬೇಸಿಗೆಯ ದಿನಗಳಲ್ಲಿ ನೀರಾವರಿ ಪ್ರದೇಶಗಳಲ್ಲಿ ಅಸಂಖ್ಯಾತ ಕೃಷಿ ಕಾರ್ಮಿಕರ ತಾತ್ಕಾಲಿಕ ವಲಸೆ.

ಈ ನೀರಾವರಿ,ಯಾಂತ್ರಿಕರಣ,ಇವುಗಳ ಜೊತೆಗೇ ಇನ್ನೊಂದು ಕೃಷಿಯಲ್ಲಿ ಕಾಣಿಸುತ್ತಿದೆ. ಎಲ್ಲಾ ಕಡೆ ತಮಗಾಗಿ ಬೆಳೆಯುವ ಆಹಾರದ ಬೆಳೆಗಳು ಕಡಿಮೆಯಾಗಿ ವಾಣಿಜ್ಯಬೆಳೆಗಳು ಹೆಚ್ಚಾಗಿರುವುದು. ಇದರಿಂದ ಹಿಂದಿನ ಸ್ವಯಂ ಸಂಪೂರ್ಣ ಹಳ್ಳಿಗಳು–ಗಾಂಧೀಜಿಯ ಗ್ರಾಮ ರಾಜ್ಯ ಅಳಿದು ರೈತನ ಬದುಕು ಪೂರ್ಣವಾಗಿ ಮಾರುಕಟ್ಟೆಯ ಹಿಡಿತಕ್ಕೆ ಸಿಗುತ್ತದೆ. ಈ ಹಳ್ಳಿಯ ಜನರಿಗೆ ಬೇಕಾದ ಆಹಾರ ಹಳ್ಳಿಯಲ್ಲೇ ಉತ್ಪನ್ನವಾಗಿ, ಆಯಗಾರರ (ನಾಯಿಂದ, ಬಡಗಿ, ಕಮ್ಮಾರ ಮೊದಲಾದವರು) ಮೂಲಕ ಹಳ್ಳಿಗೆ, ಕೃಷಿಗೆ ಬೇಕಾದ ಎಲ್ಲಾ ವಸ್ತುಗಳೂ ಅಲ್ಲಿಯೇ ಉತ್ಪನ್ನವಾಗುವಸ್ಥಿತಿ ಹೋಗಿ ಮಾರುಕಟ್ಟೆಯ ಹಿಡಿತಕ್ಕೆ ಒಳಗಾಗಿರುವ ಪರಿಣಾಮ ಹಲವು ವಿಧ.

ಅವುಗಳಲ್ಲಿ ಅತ್ಯಂತ ಮುಖ್ಯವಾದದ್ದು ಹಣದ ಚಲಾವಣೆ ಹೆಚ್ಚಾಗಿರುವುದು. ಬಹಳಮಂದಿ ಭೂಮಾಲಿಕರೂ, ರೈತರು ಕೂಡ ಹಣದ ಬೆಳೆಗಳಾದ ಹತ್ತಿ, ಕಬ್ಬು, ಹೊಗೆಸೊಪ್ಪು, ಕಡಲೇಕಾಯಿ,ರೇಷ್ಮೆ,ತರಕಾರಿ ಇತ್ಯಾದಿಗಳನ್ನು ಬೆಳೆದು ತಮಗೆ ಬೇಕಾದ ಆಹಾರ ಧಾನ್ಯಗಳನ್ನೂ ಬೆಳೆದುಕೊಳ್ಳದೆ ಮಾರುಕಟ್ಟೆಯಿಂದ ತರುವುದು ಮಾತ್ರವಲ್ಲ ತೊಗರಿ, ಭತ್ತದಂತಹ ಆಹಾರ ಬೆಳೆಗಳೂ ಹಣದ ಬೆಳೆಗಳಾಗಿ ಕೇವಲ ಮಾರುಕಟ್ಟೆಯಲ್ಲಿ ಮಾರುವುದಕ್ಕಾಗಿಯೇ ಬೆಳೆಯುವ ಬೆಳೆಗಳಿಗಾಗಿ ಪರಿವರ್ತನೆಯಾಗಿದೆ.

ಯಾವಾಗ ರೈತರೇ ತಮ್ಮ ಕುಟುಂಬಕ್ಕೆ ಬೇಕಾದ ಆಹಾರ ಧಾನ್ಯಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳುವ ಅಭ್ಯಾಸ ಬೆಳೆಯುತ್ತಿದೆಯೋ ಆಗ ಕೃಷಿ ಕಾರ್ಮಿಕರಿಗೆ ಕೊಡುವ ಕೂಲಿ ಹಣವಾಗಿ ಪರಿವರ್ತನೆಯಾಯಿತು. ಹಿಂದೆಲ್ಲಾ ಕೃಷಿ ಕಾರ್ಮಿಕರಿಗೆ ಭತ್ತ, ರಾಗಿ, ಜೋಳ ಮಾತ್ರವಲ್ಲ ತಾಂಬೂಲ ಹೊಗೆಸೊಪ್ಪು ಬೀಡಿಯನ್ನು ಕೂಲಿಯಾಗಿ ಕೊಡುತ್ತಿದ್ದ ಪರಿಪಾಠ ತಪ್ಪಿ ಹೋಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಊಟ ನೀಡಿ ಅದರ ಮೇಲೆ ಇಷ್ಟ ರೂ.ಕೂಲಿ ಎಂದು ನಿಗದಿ ಮಾಡುವ ರೂಢಿಗೆ ಬದಲಾಗಿ ಎರಡು ರೂ.ಜಾಸ್ತಿ ಕೂಲಿ ತೆಗೆದುಕೊಳ್ಳಿ ಊಟ ಕೇಳಬೇಡಿ ಎಂಬ ರೂಢಿ ಬರುತ್ತಿದೆ.

ಹಣರೂಪದ ಕೂಲಿ ಮತ್ತು ಬಡತನ ಕೂಲಿಕಾರರ ಜೀವನದ ಮೇಲೆ ಇದರ ಪರಿಣಾಮ ದುರ್ಭರವಾಗಿದೆ. ಅವರು ಕೂಡ ಭಾರತವೆಂಬ ದೊಡ್ಡ ಮಾರುಕಟ್ಟೆಯ ಭಾಗವಾಗಿದ್ದಾರೆ. ಈ ಮಾರುಕಟ್ಟೆಯಲ್ಲಿ ಅತ್ಯಂತ ಅಗ್ಗವಾಗಿ ಮಾರಾಟವಾಗುವ ಸರಕಾಗಿ ಹೋಗಿದ್ದಾರೆ ಕೃಷಿಕಾರ್ಮಿಕರು

ಧಾನ್ಯವನ್ನೋ, ಊಟವನ್ನೋ, ಬಟ್ಟೆಯನ್ನೊ, ಅವರಿಗೆ ಕೂಲಿಯಾಗಿ ಕೊಡುತ್ತಿದ್ದಾಗ ಆ ಹಳ್ಳಿಯಲ್ಲಿ ಬೆಳೆದ ತಯಾರಾದ ವಸ್ತು ಪಟ್ಟಣದ ಮಾರುಕಟ್ಟೆಗೆ ಹೋಗಿ ಮತ್ತೆ ಹಳ್ಳಿಗೆ ಬಂದು ಕೂಲಿಗಾರರು ಕೊಳ್ಳುವ ವಸ್ತುವಾಗದೆ ಅಲ್ಲಿಯೇ ಬೆಳೆದ ವಸ್ತು ಅಲ್ಲಿಯೇ ವಿತರಣೆ ಯಾಗಿ ಬಿಡುತ್ತಿತ್ತು. ಆಗ ಮಾರುಕಟ್ಟೆಯಲ್ಲಿ ಬೆಲೆ ತೀವ್ರವಾಗಿ ಏರಿದರು ಕೃಷಿ ಕಾರ್ಮಿಕರಿಗೆ ಅದರಿಂದ ಸ್ವಲ್ಪ ಮಟ್ಟಿಗೆ ರಕ್ಷಣೆ ಸಿಗುತ್ತಿತ್ತು. ಬೆಲೆ ಏರಿಕೆಯಿಂದ ರಕ್ಷಣೆಯ ಜೊತೆಗೆ ಕೇಂದ್ರ ಸರ್ಕಾರಗಳು ರಾಜ್ಯ ಸರ್ಕಾರಗಳು ಹಾಕುವಮಾರಾಟತೆರಿಗೆಇತ್ಯಾದಿ ಅಸಂಖ್ಯ ಅಪ್ರತ್ಯಕ್ಷ ತೆರಿಗೆಗಳಿಂದಲೂ ಸ್ವಲ್ಪ ಮಟ್ಟಿಗೆ ರಕ್ಷಣೆ ಸಿಗುತಿತ್ತು. ಈಗ ರಕ್ಷಣೆ ಮಾಯವಾಗುತ್ತಿದೆ.

ರಾಜೀವಗಾಂಧಿಯವರು ಹಾಕಿದ ಪ್ರತಿಯೊಂದು ತೆರಿಗೆಯೂ, ಏರಿಸಿದ ಗೋಧಿ, ಅಕ್ಕಿ, ಸೀಮೆಣ್ಣೆ,ಪೆಟ್ರೋಲ್ ದರಗಳೂ ಅಸಂಖ್ಯಾತ ಕೃಷಿಕಾರ್ಮಿಕರ ಮೇಲೆ ತೀವ್ರ ಪರಿಣಾಮ ಬೀರುತ್ತಿವೆ. ಅಷ್ಟು ಮಾತ್ರವಲ್ಲ ರೂಪಾಯಿಯ ಬೆಲೆ ಇಳಿದಂತೆಲ್ಲಾ ಇಡೀ ದೇಶದ ದುಡಿಯುವ ಜನರ ಬದುಕು ಕುಗ್ಗಿದಂತೆ ಅದಕ್ಕಿಂತ ಹೆಚ್ಚಾಗಿ ಕೃಷಿ ಕಾರ್ಮಿಕರ ಬದುಕು ಕುಸಿಯುತ್ತಿದೆ. ಹೀಗೆ ಕೇಂದ್ರ ಸರ್ಕಾರ ದೆಹಲಿಯಲ್ಲಿ ಕೂತು ಹಾಕುವ ಒಂದೊಂದು ಗೆರೆಯೂ ಬಡಜನರ, ಕೃಷಿ ಕೂಲಿಕಾರರ ನ್ನೈಯ ಮೇಲಿನ ಬಾಸುಂಡೆಗಳಾಗುತ್ತಿವೆ.

ಇಂತಹ ಪರಿಸ್ಥಿತಿಯ ಫಲವಾಗಿ ಗ್ರಾಮೀಣ ಕೂಲಿಕಾರರ ಬದುಕು ಹದಗೆಟ್ಟು ಬಡತನದ ರೇಖೆ ಎಂದು ಕರೆಯುವ ತಿಂಗಳಿಗೆ 75-80ರೂ ಆದಾಯಕ್ಕಿಂತ ಕೆಳಗಿನ ಮಟ್ಟದಲ್ಲಿ ಶೇ 80ರಷ್ಟು ಕೃಷಿಕಾರ್ಮಿಕರು ಕೊಳೆಯುತ್ತಿರುವುದು. ಈ ಜನ ಪ್ರತಿತಿಂಗಳಿಗೆ ಪ್ರತಿ ವ್ಯಕ್ತಿಗೆ ಆಹಾರಕ್ಕಾಗಿ ಮಾಡುವ ವೆಚ್ಚ ಕೇವಲ 31ರೂ.ಅಂದರೆ ದಿನವೆಲ್ಲಾ ಸೇರಿ ಕೇವಲ ಒಂದು ರೂ. ಈ ನಮ್ಮ ಜನಕ್ಕೆ ಶಿಕ್ಷಣ, ಮನೆ, ಆರೋಗ್ಯದ ಮಾತೆಲ್ಲಿ.

ಪರಿಹಾರಗಳು

ಹೀಗೆ ಕೃಷಿ ಕಾರ್ಮಿಕರ ಕೂಲಿಯೆಲ್ಲಾ ಹಣದ ರೂಪಕ್ಕೆ ಪರಿವರ್ತನೆ ಹೊಂದಿದಾಗ ಹಣದ ಬೆಲೆ ಕುಗ್ಗುವುದಕ್ಕೆ ಸರಿಸಮನಾಗಿ ಬೆಲೆ ಏರಿಕೆಯ ಜೊತೆ ಜೊತೆಗೆ ಕಾರ್ಮಿಕರ ಕೂಲಿಯೂ ಏರಬೇಕು. ಇದಕ್ಕೆ ಸರಕಾರ ಕೃಷಿ ಕಾರ್ಮಿಕರ ಕೂಲಿಯನ್ನು ಆಗಿಂದಾಗ್ಗೆ ಪುನರ್ವಿಮರ್ಶೆ ಮಾಡಬೇಕು. ಹಾಗೂ ಬೆಲೆಏರಿಕೆಯ ಪರಿಣಾಮವನ್ನು ಸರಿದೂಗಿಸಲು ತುಟ್ಟಿಭತ್ತೆಯನ್ನು ನಿಗದಿಗೊಳಿಸುವುದರ ಜೊತೆಗೆ ಅದು ಜಾರಿಯಾಗಬೇಕಲ್ಲ.

ಇಲ್ಲಿಯವರೆಗೆ ನಿಯಮ ಪ್ರಕಾರ ಸೂಚಿಸಿದ ಕನಿಷ್ಠ ಕೂಲಿಯ ಮಟ್ಟವನ್ನು ರಾಜ್ಯ ಯಾವುದೇ ಭಾಗದಲ್ಲಿ ಯಾದರೂ ಜಾರಿಗೊಳಿಸಿದ್ದುಂಟೆ? ನಗರಗಳ ಸುತ್ತುವಲಯದಲ್ಲಿ ಕೈಗಾರಿಕೆಗಳೊಡನೆ ಸ್ಪರ್ಧಿಸಬೇಕಾದ ಕಾರಣಕ್ಕಾಗಿ ರೈತರು,ಭೂಮಾಲಿಕರು ತಾವೇ ತಾವಾಗಿ ಕನಿಷ್ಠ ಕೂಲಿ ನೀಡುವುದಲ್ಲದೆ ಎಲ್ಲಿಯಾದರೂ ಕನಿಷ್ಠ ಕೂಲಿಗಿಂತ ಕಡಿಮೆ ಕೂಲಿ ನೀಡಿದರೆಂದು ಯಾರನ್ನಾದರೂ ಶಿಕ್ಷೆಗೆ ಗುರಿಪಡಿಸಿದ ಉದಾಹರಣೆಗಳುಂಟೆ? ರಾಜ್ಯದಲ್ಲಿ ಅತಿ ಹೆಚ್ಚು ಕೃಷಿ ಕಾರ್ಮಿಕರಿರುವ ಜಿಲ್ಲೆಗಳಾದ ಗುಲ್ಬರ್ಗಾ,ಬಿಜಾಪುರ, ರಾಯಚೂರು ಬಳ್ಳಾರಿ,ಬೀದರ್‌ಗಳಲ್ಲಿ ಕೂಲಿಯ ಪರಿಸ್ಥಿತಿ ಇಂದಿಗೂ 4-5ರೂ. ಆಸುಪಾಸಿನಲ್ಲಿಯೇ ಇದೆ. ಹೆಣ್ಣುಮಕ್ಕಳಿಗೆ ಮತ್ತಷ್ಟು ಕಡಿಮೆ. ಆದರೆ ಸರಕಾರದ ಕನಿಷ್ಠ ಕೂಲಿ 8-60ರೂ. ಈ ಕನಿಷ್ಠ ಕೂಲಿಯು ಯಾವುದೇ ವೈಜ್ಞಾನಿಕ ಆಧಾರವಿಲ್ಲದೆ ಇಂದಿನ ಬೆಲೆಏರಿಕೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ನಿಗದಿಯಾದದ್ದು. ಸಿ. ಐ. ಟಿ.ಯು, ಹಾಗೂ ಪ್ರಾಂತ ರೈತ ಸಂಘದ ಸೂಚನೆ–ರೂ ಹತ್ತು ಜೊತೆಗೆ ತುಟ್ಟಿಭತ್ಯ.

ಕನಿಷ್ಠ ಕೂಲಿಯನ್ನು ಜಾರಿ ಗೊಳಿಸಲು ಕಾನೂನು ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಸರಕಾರ ಕೂಲಿಗಾಗಿಯೇ ತಂದ NREP ಮೊದಲಾದ ಯೋಜನೆಗಳ ಮೂಲಕ ಬೇರೆ ಬೇರೆ ಪ್ರದೇಶಗಳಲ್ಲಿ ವ್ಯಾಪಕವಾಗಿ ಕೆಲಸ ಆರಂಭಿಸಿದರೆ ಕನಿಷ್ಠ ಕೂಲಿ ಕಾನೂನಿನನ್ವಯ ಕೂಲಿ ನೀಡಿದರೆ ತಾನೇತಾನಾಗಿ

(6ನೇ ಪುಟ ನೋಡಿ)

ಕೋಮುವಾದ ಪೂರ್ತಿ ಸೋತಿಲ್ಲ

LDFನ ವಿಜಯ ಕೋಮು ಪಕ್ಷಗಳನ್ನು ಸರ್ಕಾರದಿಂದ ಹೊರಗಿಡಲು ಸಹಾಯಕವಾದರೂ ಕೋಮುವಾದ ಪೂರ್ತಿಯಾಗಿ ಸೋತಿಲ್ಲ.

IUML ತನ್ನ ಎಲ್ಲಾ 15 ಸೀಟುಗಳನ್ನೂ ಉಳಿಸಿಕೊಂಡಿದೆ. ಆದರೆ LDFನ ಭಾಗವಾಗಿAIMLಗೆದ್ದಿದ್ದ 4ಸೀಟುಗಳನ್ನೂ LDFಹಿಂದೆ ಗೆದ್ದುಕೊಂಡಿದೆ. ಕೇರಳ ಕಾಂಗ್ರೆಸ್ ಎರಡೂ ಬಣಗಳ ಬಲ 14ರಿಂದ 9ಕ್ಕೆ ಕುಗ್ಗಿದೆ ಎಂಬುದು ಸಮಾಧಾನಕರ ಅಂಶ. ಹಾಗೆ ಜಾತಿವಾದಿ ಪಕ್ಷಗಳಾದ NDPಯ ಬಲ 4ರಿಂದ 1ಕ್ಕೆ ತಗ್ಗಿದೆ.SRP ಪೂರ್ತಿ ಅಳಿಸಿ ಹೋಗಿದೆ. ಆದರೆ ಈ ಹಿಂದೂ ಜಾತಿವಾದಿ ಮತಗಳನ್ನು BJPಹಿಂದೂ ಮುನ್ನಾನಿ ರಂಗ ಗಳಿಸಿಕೊಂಡಿದೆ. ಯಾವುದೇ ಸೀಟು ಗಳಿಸದಿದ್ದರೂ ಈ ರಂಗ 82ರಿಂದ 87ಕ್ಕೆ ತನ್ನ ಶೇಖಡಾ ಮತಗಳನ್ನು 2.75ರಿಂದ 6.48ಕ್ಕೇರಿಸಿಕೊಂಡಿದೆ. ಈ ರಂಗದ 122 ಅಭ್ಯರ್ಥಿಗಳಲ್ಲಿ 116 ಜನ ಠೇವಣಿ ಕಳೆದುಕೊಂಡಿದ್ದಾರೆ. ಆದರೆ ಹಿಂದೂ ಕೋಮುವಾದವನ್ನು ಪ್ರತಿನಿಧಿಸುವ ಅಭ್ಯರ್ಥಿಗಳು 3 ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿ ಬಂದರೆ ಇನ್ನೂ ಹಲವಲ್ಲಿ 3ನೇ ಸ್ಥಾನಕ್ಕೆ ಬಂದಿದ್ದಾರೆ ಎಂಬುದು ಸ್ವಲ್ಪ ಆತಂಕಕಾರಿ ಅಂಶ.

ಕೇರಳ ಜಿಲ್ಲಾವಾರು ಫಲಿತಾಂಶ

ಜಿಲ್ಲೆ	1982		1987	
	LDF	UDF	LDF	UDF
ಕಾಸರಗೋಡು	4	1	1	4
ಕಣ್ಣಾನೂರು	7	3	6	3
ವೈನಾಡ್	–	3	1	2
ಕೋಳಿಕೋಡ್	9	3	9	3
ಮಲಪ್ಪುರಂ	1	11	–	12
ಪಾಲ್‌ಘಾಟ್	9	2	4	7
ತ್ರಿಚುರ್	7	7	8	6
ಎರ್ನಾಕುಲಂ	2	12	8	6
ಇಡುಕ್ಕಿ	2	3	1	4
ಕೊಟ್ಟಾಯಂ	3	7	5	3
ಆಲೆಪ್ಪಿ	2	5	7	4
ಕ್ವಿಲೋನ್	4	8	11	1
ತ್ರಿವೇಂದ್ರಮ್	8	6	12	1

ಕುಲ ಗೆಟ್ಟ ಪಕ್ಷ

'ಭಯಂಕರ ಕ್ರಾಂತಿಕಾರಿ' ಎಂ.ವಿ. ರಾಘವನ್‌ರ ಪಕ್ಷ 84 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು,UDF ಬೆಂಬಲವಿದ್ದ 2 ಕ್ಷೇತ್ರಗಳನ್ನು ಬಿಟ್ಟರೆ ಉಳಿದ ಎಲ್ಲಾ 82 ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿದೆ. ಈ 82 ಕ್ಷೇತ್ರಗಳಲ್ಲಿ ರಾಘವನ್‌ರ ಪಕ್ಷಕ್ಕೂ ಕುಲಗೆಟ್ಟ ಮತಗಳಿಗೂ ಭಾರಿ 'ಪೈಪೋಟಿ' ನಡೆದಿತ್ತು. ಇದರಲ್ಲೂ ರಾಘವನ್‌ರ ಪಕ್ಷ ಸೋತಿದೆ. 82ರಲ್ಲಿ 51 ಕ್ಷೇತ್ರಗಳಲ್ಲಿ ಈ ಪಕ್ಷದ ಮತಗಳು ಕುಲಗೆಟ್ಟ ಮತಗಳಿಗಿಂತ ಕಡಿಮೆ. ಅಂದರೆ ಕೇರಳದ ಜನ ಈ ಪಕ್ಷ 'ಕುಲಗೆಟ್ಟದೆ' ಎಂದು ತೀರ್ಮಾನಿಸಿದ್ದಾರೆ!

ಶೇಕಡಾವಾರು ಮತಗಳಿಕೆ

ರಂಗ	1982	1987
LDF	47.24	44.57
UDF	48.23	43.41
BJP	2.75	6.48
CMP	–	0.7

ನೀರಿಗಾಗಿ ಸರ್ವ ಪಕ್ಷಗಳ ಹೋರಾಟ

ಗುಲ್ಬರ್ಗಾ

ಗುಲಬರ್ಗಾ ನಗರವು 4 ಲಕ್ಷ ಜನ ಸಂಖ್ಯೆ ಹೊಂದಿದ್ದು 1972 ರಿಂದ ಕುಡಿಯುವ ನೀರಿನ ತೊಂದರೆ ಅನುಭವಿಸುತ್ತಾ ಬಂದಿದೆ.

ಸತತವಾಗಿ ನಾಲ್ಕು ವರ್ಷಗಳಿಂದ ಮಳೆಯ ತೊಂದರೆಯಿಂದ ಈ ವರ್ಷ ಕುಡಿಯುವ ನೀರು ಸಿಗದೆ ಇರುವುದರಿಂದ ಮತ್ತು ಇತ್ತೀಚೆಗೆ ನಗರ ನೀರು ಸರಬರಾಜು ಮಂಡಳಿಯು 25 ರೂಪಾಯಿಗಳು ತೆರಿಗೆ ಹೆಚ್ಚಿಸಿದನ್ನು ಪ್ರತಿಭಟಿಸಲು ಎಲ್ಲ ಪಕ್ಷಗಳನಾಗರೀಕ ಸಮಿತಿ ರಚಿಸಿ ಹೋರಾಟ ಆರಂಭಿಸಿದೆ.

18-3-87ರಂದು ಗುಲಬರ್ಗಾ ಬಂದ್ ಆಚರಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿ ಕೊಡಲಾಯಿತು. ಕರ್ನಾಟಕ ಜಲ ಮಂಡಳಿ ಅಧ್ಯಕ್ಷ ಕುಸುಮಾಕರ್ ದೇಸಾಯಿಯವರಿಗೆ ಘೇರಾವೋ ಮಾಡಲಾಯಿತು. 3000 ಜನ ಮೆರವಣಿಗೆಯಲ್ಲಿ ಪಾಲ್ಗೊಂಡರು, ನಂತರ ಜಿಲ್ಲಾಧಿಕಾರಿಗಳ ಕಛೇರಿಯ ಸಭೆ ನಡೆದು ಸಭೆಯಲ್ಲಿ ಸಿ.ಪಿ ಐ. (ಎಂ] ಪರವಾಗಿ ಕಾಂ. ಸಿ.ಎ ಪಾಟಿಲ್ ಕಾಂ. ಮಾನಪಡೆ ಮಾತನಾಡಿದರು.

ಒಂದು ವಾರದ ಗಡವು ನೀಡಿ ಭೀಮಾ ನದಿಯಿಂದ ನೀರು ಪೂರೈಸಲು ಮಂಜುರಾತಿ ನೀಡದೆ ಇದ್ದರೆ. ಎರಡನೇಯ ಹಂತದ ಹೋರಾಟ ಪ್ರಾರಂಭಿಸುವುದಾಗಿ ಎಚ್ಚರಿಕೆ ನೀಡಿತು.

ಪೂರ್ವನಿರ್ಣಯದಂತೆ 25.3.87 ಗುಲಬರ್ಗಾ ಮುಖ್ಯ ಬೀದಿಗಳಲ್ಲಿ ಮೂರು ಗಂಟೆಗಳ ಕಾಲ ರಸ್ತಾರೋಖೋ ಮಾಡಲಾಯಿತು. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬಂದು ತಾತ್ಕಾಲಿಕವಾಗಿ 80 ಟ್ಯಾಂಕರ್ ಮತ್ತು 300 ಕೊಳವೆ ತೋಡಲಾಗುವುದು ಎಂದು ಆಶ್ವಾಸನೆ ಕೊಟ್ಟರು.

ಭೀಮಾ ನದಿಯಿಂದ ನೀರುಪೂರೈಕೆಗಾಗಿ ಮಂಜುರಾತಿ ನೀಡಲು ತಾತ್ವಿಕವಾಗಿ ಒಪ್ಪಿದ್ದಾರೆಂದು ತಿಳಿಸಿದರು.

ಇಂತಹ ಅನೇಕ ಭರವಸೆ ಸುಳ್ಳಾದ್ದರಿಂದ ಮತ್ತು ರಾಜ್ಯ ಸರ್ಕಾರದ ಸಂಪುಟದಲ್ಲಿ ಈ ಬಗ್ಗೆ ತಿರ್ಮಾನವಾದ್ದರಿಂದ ಹೋರಾಟ ಮುಂದುವರೆಸಿ 26.3.87 ಬೆಳಗ್ಗೆ ಬೊಂಬಾಯಿ ಬೆಂಗಳೂರು 6-20ರ ಉದ್ಯಾನ ಎಕ್ಸ್ ಪ್ರೆಸ್, 2-30 ಗಂಟೆ ಕಾಲ ರೈಲ್ ರೋಕೋ ಮಾಡಲಾಯಿತು.

ತಾ. 27.3.87 ರಂದು ಬೆಳಗ್ಗೆ 4-00 ಗಂಟೆಯಿಂದ 9 ಗಂಟೆಯವರೆಗೆ 5 ಗಂಟೆಗಳ ಕಾಲ ಕೇಂದ್ರ ಬಸ್ ನಿಲ್ದಾಣದಿಂದ ಹೊರಡುವ ಬರುವ ಎಲ್ಲಾಬಸ್ಸುಗಳನ್ನು ತಡೆಯುಲಾಯಿತು.

31.3.87ರಂದು ಜಿಲ್ಲಾ ಪರಿಷತ್ ಸಭೆಗೆ ಬರುವ 14 ಜನರ ಶಾಸಕರ ಗಮನ ಸೆಳೆಯುಲು ಮತ್ತು ಸಭೆಗೆ ತಡೆಯುಂಟು ಮಾಡಿದ್ದರಿಂದ ಸಭೆಯು ಭೀಮಾ ನದಿಯಿಂದ ನೀರು ಪೂರೈಕೆ ಮಂಜುರಾತಿ ನೀಡಲು ಸರ್ವಾನುಮತದ ನಿರ್ಣಯ ಅಂಗೀಕರಿಸಿತು.

ನಾಗರಿಕ ಸಮಿತಿಯ ಹೋರಾಟದಲ್ಲಿ ಸಿ.ಪಿ.ಪಿ (ಎಂ) ಸಿ.ಐ.ಟಿ.ಯು. ಸಿ.ಪಿ ಐ, ಜನತಾ, ಲೋಕದಳ ಮುಸ್ಲಿಂ ಲೀಗ್, ಬಿಜೆಪಿ, ಮಹಾನಗರ ಸಭೆಯ ಮೇಯರ್, ಉಪಮೇಯರ್ ಮುಂತಾದವರು ಪಾಲ್ಗೊಂಡಿದ್ದರು.

ಬಿಜಾಪುರದಲ್ಲಿ ಖಾಲಿ ಕೊಡಗಳ ಮೆರವಣಿಗೆ

ಸ್ವಾತಂತ್ರ್ಯಗಳಿಸಿದ 41 ವರ್ಷಗಳ ನಂತರವೂ ಹನಿನೀರಿಗಾಗಿ ಹೋರಾಟ. ಮಹಿಳೆಯರಿಂದ ಖಾಲಿಕೊಡಗಳ ಮೆರವಣಿಗೆ. ನೀರಿನ ವ್ಯವಸ್ಥೆಗಾಗಿ ನೂರಾರು ರೈತ-ಕಾರ್ಮಿಕರ ಮತಪ್ರದರ್ಶನ. ಏಪ್ರಿಲ್ ಒಂದರಂದು ಬಿಜಾಪುರದಲ್ಲಿ ಜಿಲ್ಲಾ ರೈತ ಸಂಘ ಮತ್ತು ಸಿ.ಪಿ.ಐ. (ಎಂ) ಪರವಾಗಿ ನೀರು ಪೂರೈಕೆಗೆ ಆಗ್ರಹಿಸಿ ನಡೆದ ಹೋರಾಟ. ನಗರ ಸಭೆ ಕಮಿಶನರಿಗೂ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಲಾಯಿತು.

ಕೊಯಿನಾ ನೀರು ಕೃಷ್ಣಾನದಿಗೆ ಬಿಡುಗಡೆಯಾಗುವುದು, ಮುಳುವಾಡಯಾತ ನೀರಾವರಿಯ ಕೆಲಸಪ್ರಾರಂಭ, ಹೆಚ್ಚುಕೊಳವೆ ಬಾವಿಗಳ ವ್ಯವಸ್ಥೆ ಎತ್ತರದಟ್ಯಾಂಕ್‌ಗಳ ನಿರ್ಮಾಣವೊದಲಾದ ಬೇಡಿಕೆಗಳಿಗಾಗಿ ಹೋರಾಟ. ಸರ್ಕಾರದ ಮೇಲೆ ಹೊತ್ತಾಯ ತರುವಸಲುವಾಗಿ ಗಾಂಧಿಚೌಕಿನಲ್ಲಿ ಸರದಿ ಅನ್ನ ಸತ್ಯಾಗ್ರಹ. ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿಯವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದ ಪರಿಣಾಮವಾಗಿ ಹೆಚ್ಚು ಕೊಳವೆಬಾವಿ ತೋಡಿಸಲು ಜಿಲ್ಲಾಧಿಕಾರಿಗಳಿಂದ ಆಶ್ವಾಸನೆ. ○

ಬಗರ ಹುಕುಂ ಭೂಮಿ ರೈತನದಾಗಲಿ

ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಕಳ್ಳಂಬೆಳ್ಳ ಜಲಾಶಯದ ಪ್ರದೇಶದಲ್ಲಿ ಹಾಗೆಯೇ ಹುಜನಾಳು, ಸೋರ ಕುಂಟೆ, ಮಲ್ಲೇನಹಳ್ಳಿ, ಪಿ.ಜಿ ಪಾಲ್ಯ, ನೆಲಹಾಳ ಚಿಕ್ಕಸೀಬಿ ವಗ್ಯೆರೆ ಗ್ರಾಮದ ಜನರು 15 ವರ್ಷಗಳಿಂದಲೂ ತಮ್ಮ ಹಳ್ಳಿಯ ಹತ್ತಿರ ವಿರುವ ಪಾಳು ಬಿದ್ದಿದ್ದ. ಭೂಹೀನ ರೈತರು, ಹಿಂದುಳಿದವರು ಭೂಮಿ ಸರಿಪಡಿಸಿ ವ್ಯವಸಾಯ ಮಾಡುತ್ತಿದ್ದಾರೆ. ಈ ಜಮೀನನ್ನು ರೈತರ ಹೆಸರಿನಲ್ಲೆ ಕಾಯಂ ಮಾಡಲಾಗುವುದೆಂದು ಸರಕಾರ ಆಶಾಸನೆ ನೀಡುತ್ತಾ ಬಂದಿದೆ.

ಆದರೆ ಈಗ ಅರಣ್ಯ ಬೆಳೆಸುವ ಹೆಸರಿನಲ್ಲಿ ಅಂಥ ಭೂಮಿಗಳಲ್ಲಿ ಟ್ರೆಂಚ ತೆಗೆಯಲು ಪ್ರಾರಂಭಿಸಿದ್ದಾರೆ. ಅದರಿಂದ ಬಡರೈತರಿಗೆಲ್ಲಾ ಅನ್ಯಾಯವಾಗುತ್ತಿದ್ದು, ರೈತರು ಸಾಗು ಮಾಡುತ್ತಿರುವ ಆ ಬಗರಹುಕುಂಜಮೀನಿನಲ್ಲಿ ಅರಣ್ಯ ಬೆಳೆಸದೆ, ರೈತರಿಗೆ ಮಂಜೂರಿ ಮಾಡಬೇಕೆಂದು ಒತ್ತಾಯಿಸುವ ಮನವಿಯನ್ನು ತುಮಕೂರು ಜಿಲ್ಲಾ ರೈತ ಸಂಘದ ಪದಾಧಿಕಾರಿಗಳಾದ ಟಿ.ಕೆ. ಗೋವಿಂದ ರಾಜು ಎಚ್.ಸಿ.ಚೆನ್ನಪ್ಪ, ಆರ್. ಶ್ರಿನಿವಾಸ ಅವರು ತುಮಕೂರು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಅರ್ಪಿಸಿದ್ದಾರೆ.

ಮಂಗಳೂರಿನ ಕಾಲೇಜು ವಿದ್ಯಾರ್ಥಿಯ ವಿಜಯ

ಸಂತ ಅಲೋಶಿಯಸ್ ಸಂಧ್ಯಾ ಕಾಲೇಜಿನ ತೃತೀಯ ಕಲಾ ಪದವಿ ವಿದ್ಯಾರ್ಥಿ ದೇವದಾಸ್‌ರವರನ್ನು ಈ ಶೈಕ್ಷಣಿಕ ವರ್ಷ ಪರೀಕ್ಷೆಗೆ ಕುಳಿತುಕೊಳ್ಳುವ ಅವಕಾಶವನ್ನು ಕಾಲೇಜಿನ ಆಡಳಿತ ವರ್ಗ ನಿರಾಕರಿಸಿದಾಗ, ಸದ್ರಿ ವಿದ್ಯಾರ್ಥಿ ದೇವದಾಸ್‌ರವರು ಹೈಕೋರ್ಟಿನಲ್ಲಿ ಹಾಕಿದ್ದ ರಿಟ್ ಪಿಟಿಶನ್ ಆಧಾರದಲ್ಲಿ ಹೈಕೋರ್ಟು ಸದ್ರಿ ವಿದ್ಯಾರ್ಥಿ ದೇವದಾಸ್‌ರವರು ಪರೀಕ್ಷೆಗೆ ಕುಳಿತುಕೊಳ್ಳಲು ಅಜ್ಞೆ ಹೊರಡಿಸಿದೆ.

ದೇವದಾಸ್‌ಎಂ. ರವರನ್ನು 1986 ಫೆಬ್ರವರಿ ತಿಂಗಳಲ್ಲಿ ಕಾಲೇಜಿನ ಆಡಳಿತ ವರ್ಗ ಸುಳ್ಳು ಆರೋಪವನ್ನು ಹೊರಿಸಿ ಅಮಾನತು ಮಾಡಿ ತರಗತಿಗೆ ಹಾಜರಾಗದಂತೆ ಮಾಡಿತ್ತು. 1986 ಅಕ್ಟೋಬರ್‌ತಿಂಗಳಲ್ಲಿ ನಡೆದ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನಿರಾಕರಿಸಿತು. ಈ ಬಗ್ಗೆ ಭಾರತ ವಿದ್ಯಾರ್ಥಿ ಫೆಡರೇಷನ್ [ಎಸ್.ಎಫ್.ಐ] ಕಾಲೇಜಿನ ಆಡಳಿತ ವರ್ಗದ ಈ ನೀತಿಯ ವಿರುದ್ಧ ಹೋರಾಟ ನಡೆಸಿತ್ತು. ಆಡಳಿತ ವರ್ಗ ವಿದ್ಯಾರ್ಥಿ ಮೇಲೆ ಹೋರಿಸಿದ ಸುಳ್ಳು ಆರೋಪಗಳ ಬಗ್ಗೆ ತನಿಕೆ: ಆಯೋಗ ರಚಿಸಿ ತನಿಕೆ ನಡೆಸಿ, 4-5 ತಿಂಗಳು ಕಳೆದರೂ ಇನ್ನೂ ತನಿಖೆಯ ವರದಿಯನ್ನು ಬಹಿರಂಗ ಪಡಿಸಿಲ್ಲ ಮಾತ್ರವಲ್ಲ ಈ ಶೈಕ್ಷಣಿಕ ವರ್ಷ ನಡೆಯುವ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನಿರಾಕರಿಸಿದಾಗ,ಎಸ್ ಎಫ್ ಐ.ಸದ್ರಿ ವಿದ್ಯಾರ್ಥಿಗೆ ಆದ ಅನ್ಯಾಯದ ಬಗ್ಗೆ ವಿದ್ಯಾರ್ಥಿ ಮುಖೇನ ಹೈಕೋರ್ಟಿನಲ್ಲಿ ರಿಟ್‌ಪಿಟಿಶನ್‌ಹಾಕಿದ ಆಧಾರದಲ್ಲಿ ಈ ಆಜ್ಞೆ ಲಭಿಸಿದೆ. ಸದ್ರಿ ವಿದ್ಯಾರ್ಥಿ ಮೇಲೆ ಹೋರಿಸಿದ ಆರೋಪದ ಬಗ್ಗೆ ತನಿಖೆ ನಡೆಸಿದ ವರದಿಯನ್ನು ತಕ್ಷಣ ಬಹಿರಂಗ ಪಡಿಸಬೇಕೆಂದು ಎಸ್.ಎಫ್.ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಒತ್ತಾಯಿಸಿದೆ. ಖಾಸಗಿ ಕಾಲೇಜಿನ ಆಡಳಿತ ವರ್ಗದೊಂದಿಗೆ ಶಾಮಿಲಾಗಿ, ಮಂಗಳೂರು ವಿಶ್ವವಿದ್ಯಾಲಯ ನಿರಂತರವಾಗಿ ಈ ರೀತಿ ವಿದ್ಯಾರ್ಥಿಗಳ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯ ವಿರುದ್ಧ ವಿದ್ಯಾರ್ಥಿಗಳೆಲ್ಲಾ ಸಂಘಟಿತರಾಗಬೇಕೆಂದು ಎಸ್.ಎಫ್.ಐ. ಕರೆನೀಡಿದೆ. ●

ಸಿ.ಐ.ಟಿ.ಯು. ಧರಣಿ

ಮೈಸೂರಿನಲ್ಲಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಕರೆಯ ಮೇರೆಗೆ 26-3-1987ರಂದು ಕಾರ್ಮಿಕ ಕಛೇರಿ ಮುಂದೆ ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಲಾಯಿತು. ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಮೋಹನ್ ಕುಮಾರ್, ಅಣ್ಣಪ್ಪ, ಶಾಂತಪ್ಪ ಮಾತನಾಡಿದರು. ○

ಸಿ. ಐ. ಟಿ. ಯು. 6ನೇ ಅಖಿಲ ಭಾರತ ಸಮ್ಮೇಳನ

ಅಖಿಲ ಭಾರತ ಸಿ.ಐ.ಟಿ.ಯು. 6ನೇ ಸಮ್ಮೇಳನ ಮೇ 18ರಿಂದ 22ರ ವರೆಗೆ ಮುಂಬಯಿ ಷಣ್ಮುಖಾನಂದ ಹಾಲ್‌ನಲ್ಲಿ ನಡೆಯುತ್ತದೆ. ಪ್ರತಿನಿಧಿಗಳಿಗೆ ರಾಜಾ ಶಿವಾಜಿ ವಿದ್ಯಾಲಯದಲ್ಲಿ ವ್ಯವಸ್ಥೆ ಮಾಡಲಾಗಿದೆ.

ಕರ್ನಾಟಕದ 70 ಪ್ರತಿನಿಧಿಗಳು ತಪ್ಪದೇ ಸಮ್ಮೇಳನದಲ್ಲಿ ಹಾಜರಾಗಬೇಕು.

ವಿ ಜ ಯೋ ತ್ಸ ವ

ಭದ್ರಾವತಿ

ದಿನಾಂಕ 5-4-87ರಂದು ಜನರಲ್ ಎಂಪ್ಲಾಯಿಸ್ ಮತ್ತುಹಮಾಲ್ಲ ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಎ. ಗೋವಿಂದನ್ ರವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿಯ ಸಭೆ ಸೇರಿ ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲಿ ಕಳೆದ ತಿಂಗಳು 23ರಂದು ನಡೆದ ಚುನಾವಣೆಯಲ್ಲಿ ಅಲ್ಲಿನ ಮತದಾರರು ಛಿದ್ರಕಾರಿಗಳ ವಿರುದ್ಧ ಜಾತೀವಾದಿಗಳನ್ನು ತಿರಸ್ಕರಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಅಧಿಕಾರ ನಡೆಸಲು ಆದೇಶ ನೀಡಿದ ಕೇರಳ ಹಾಗೂ ಪಶ್ಚಿಮ ಬಂಗಾಳದ ಮತದಾರರಿಗೆ ಸಂಘವು ಅಭಿನಂದನೆ ಸಲ್ಲಿಸಿತು.

ಕಾರ್ಮಿಕ ಸಂಘಗಳ ಮತ್ತು ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಳ್ಳುವ ಕರಾಳ ಮಸೂದೆಗಳನ್ನು ರಾಜೀವ್‌ಗಾಂಧಿ ಸರಕಾರವು ಸಂಸತ್ತಿನಲ್ಲಿ ಮಂಡಿಸುವುದನ್ನು ವಿರೋಧಿಸಲು ಮತ್ತು 1960= 100 ಗ್ರಾಹಕರ ಬೆಲೆ ಸೂಚ್ಯಾಂಕದಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸದೆ ತರಾತುರಿಯಲ್ಲಿ 1982= 100 ಬೆಲೆ ಸೂಚ್ಯಾಂಕವನ್ನು ತರುವುದನ್ನು ಪ್ರತಿಭಟಿಸಿ 16-4-87ರಂದು ದೇಶಾದ್ಯಂತ ನಡೆಯುವ ಪ್ರತಿಭಟನಾ ಪ್ರದರ್ಶನದ ಅಂಗವಾಗಿ ಭದ್ರಾವತಿಯಲ್ಲಿ ಜನರಲ್ ಎಂಪ್ಲಾಯಿಸ್ ಮತ್ತು ಹಮಾಲಿ ಕಾರ್ಮಿಕರ ಸಂಘ(ಸಿ.ಐ.ಟಿ.ಯು)ದ ವತಿಯಿಂದ ಅಪ್ಪರ್ ಹುತ್ತಾ ಬಸ್ ನಿಲ್ದಾಣದಿಂದ ಸಂಜೆ 3-30 ಗಂಟೆಗೆ ಪ್ರತಿಭಟನಾ ಮೆರವಣಿಗೆ ನಡೆಸಲು ತೀರ್ಮಾನಿಸಲಾಯಿತು ಎಂದು ಕಾರ್ಯದರ್ಶಿ ಬಸವರಾಜ ತಿಳಿಸುತ್ತಾರೆ.

ಸಿಂಧನೂರು

ಕೇರಳ ಮತ್ತು ಪಶ್ಚಿಮ ಬಂಗಾಳದ ಜನತೆ ಇತ್ತೀಚಿನ ವಿಧಾನ ಸಭಾ ಚುನಾವಣೆಗಳಲ್ಲಿ ಕೋಮುವಾದಿ, ವಿಚ್ಛಿದ್ರಕಾರಿ, ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಂಬಲಿಸಿ ಅಧಿಕಾರಕ್ಕೆ ತರುವ ಮೂಲಕ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ ಅಲ್ಲದೆ, ಇಡೀ ದೇಶದ ಜನತೆ ಈ ವಿಚಾರದಲ್ಲಿ ಸರಿಯಾದ ದಿಕ್ಕಿನಲ್ಲಿ ಮುನ್ನಡೆಯಲು ಮಾರ್ಗದರ್ಶಕರಾಗಿದ್ದಾರೆ.

ಸಿಂದನೂರಿನಲ್ಲಿ ಪಕ್ಷದ ಮತ್ತು ಸಾಮಾಜಿಕ ಸಂಘಟನೆಯ ಕಾರ್ಯಕರ್ತರು ಈ ವಿಜಯವನ್ನು ಅತ್ಯುತ್ಸಾಹದಿಂದ ದಿನಾಂಕ 25-3-87ರಂದು, ಊರಿನ ಪ್ರಮುಖ ಬೀದಿಗಳಲ್ಲಿ ಬಾಣ ಬಿರುಸುಗಳನ್ನು ಹಾರಿಸಿ, ಮೆರವಣಿಗೆ ಮಾಡುವುದರ ಮುಖಾಂತರ ಆಚರಿಸಿದರು. ಚಿನ್ನಮ್ಮ ವೃತ್ತದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಾ|| ಕೆ. ಬಸವ ರಾಜ್ ಅವರು, ಪಶ್ಚಿಮ ಬಂಗಾಳ ಸರಕಾರ ಕಳೆದ ಹತ್ತು ವರ್ಷಗಳಲ್ಲಿ ದುಡಿಯುವ ಜನತೆಯ ಪರವಾಗಿ ಹೇಗೆ ಕೆಲಸ ಮಾಡುತ್ತಾ, ವಿಚ್ಛಿದ್ರಕಾರಿ ಕೋಮುವಾದಿ, ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡುತ್ತದೆ ಎಂಬುದನ್ನು ವಿವರಿಸಿ, ಅಂಥ ಸರಕಾರವನ್ನು ಮತ್ತೆ ಅಧಿಕಾರಕ್ಕೆ ತಂದ, ಕೇರಳ ಹಾಗೂ ಪಶ್ಚಿಮ ಬಂಗಾಳದ ಜನತೆಯನ್ನು ಅಭಿನಂದಿಸಿದರು.

ಮೈಸೂರು

ಪಶ್ಚಿಮ ಬಂಗಾಳದಲ್ಲಿ ಎಡರಂಗ ಹಾಗು ಕೇರಳದಲ್ಲಿ ಎಡ-ಪ್ರಜಾಪ್ರಭುತ್ವವಾದಿ ರಂಗವು ಇತ್ತೀಚಿನ ವಿಧಾನ ಸಭಾ ಚುನಾವಣೆಯಲ್ಲಿ ಪ್ರಚಂಡ ಗೆಲುವು ಸಾಧಿಸಿರುವುದರ ಹಿನ್ನೆಲೆಯಲ್ಲಿ 27-3-87 ರಂದು ಮೈಸೂರಿನ ಪಕ್ಷದ ಕಛೇರಿಯಲ್ಲಿ ವಿಜಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಪಕ್ಷದ ಸದಸ್ಯರು ಮತ್ತು ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಹಾಗೂ ಪಟಾಕಿ ಹಚ್ಚುವುದರ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು. ಸಿಹಿತಿಂಡಿಗಳ ವಿತರಣೆ ಕಛೇರಿಯ ಅಲಂಕಾರ.

ಸಿ.ಪಿ.ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾಂ. ಎಂ. ಎನ್. ಉಗ್ರಪ್ಪ ಅಧ್ಯಕ್ಷತೆ ವಹಿಸಿದರು, ರಾಜ್ಯ ಎಸ್. ಎಫ್.ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಹಾಗೂ ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಮೋಹನ್ ಕುಮಾರ್‌ರವರುಗಳು ಚುನಾವಣೆಯ ವಿಜಯದ ಮಹತ್ವದ ಬಗ್ಗೆ ವಿವರಿಸಿದರು. ●

ಬೀದರ್‌ನಲ್ಲಿ ನಾಟಕೋತ್ಸವ

ಕನ್ನಡ ಮತ್ತು ಸಾಂಸ್ಕೃತಿ ಇಲಾಖೆ ಆಶ್ರಯದಲ್ಲಿ ಮಾರ್ಚ್ 27, 28, 29 ರಂದು ನಡೆದ 3 ದಿನಗಳ ನಾಟಕೋತ್ಸವದಲ್ಲಿ ಬೀದರ್ ಗುಲ್ಬರ್ಗ, ಹೈದರ್‌ಬಾದಿನ ಒಟ್ಟು 5 ನಾಟಕ ತಂಡಗಳು ಭಾಗವಹಿಸಿದ್ದವು. ಅದರಲ್ಲಿ ಸಮುದಾಯಬೀದರ್ ಘಟಕವು ದಿ27 ರಂದು "ಒಂದು ಲೋಕ ಕಥೆ" ನಾಟಕ ಪ್ರದರ್ಶಿಸಿತು. ಇತ್ತೀಚೆಗೆ ಬೀದರ ಸಮುದಾಯ ಚೇತರಿಸಿದ್ದು ಚಟುವಟಿಕೆ ನಿರಂತರ ಸಾಗಿದೆ. ○

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಸಂಪುಟ

ಟಿ.ಕೆ. ರಾಮಕೃಷ್ಣನ್

ಎಡ ಪ್ರಜಾಪ್ರಭುತ್ವರಂಗದ ಸಂಚಾಲಕರಾದ ಇವರು ನಾಯನಾರ್‌ರವರ ಹಿಂದಿನ ಮಂತ್ರಿಮಂಡಲದಲ್ಲಿ ಗೃಹ ಸಚಿವರಾಗಿದ್ದರು. ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಸದಸ್ಯರು ಹಾಗೂ ಅಖಿಲ ಭಾರತ ಕಿಸಾನ್‌ಸಭಾದ ಜಂಟಿ ಕಾರ್ಯದರ್ಶಿ 1957ರಿಂದ 1980ರ ವಿಧಾನ ಸಭೆಯ ಸದಸ್ಯರಾಗಿ ನಡೆದ 7 ಚುನಾವಣೆಗಳಲ್ಲಿ ಆರು ಬಾರಿ ವಿಜೇತರಾಗಿದ್ದರು. 1977ರಿಂದ 1980ರವರೆಗೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು.

ಕೆ.ಆರ್. ಗೌರಿಯಮ್ಮ

1957ರ ಮೊದಲ ಕಮ್ಯುನಿಸ್ಟ್ ಪಕ್ಷದ ಸಚಿವ ಸಂಪುಟದಲ್ಲಿ, 1967ರ ಸಂಯುಕ್ತ ರಂಗದಲ್ಲಿ ಕಂದಾಯ ಮಂತ್ರಿಯಾಗಿದ್ದರು. 1980ರ ನಾಯನಾರ್ ಸಂಪುಟದಲ್ಲಿ ಕೃಷಿಮಂತ್ರಿಯಾಗಿದ್ದರು. ಈ ಚುನಾವಣೆಗೆ ಮೊದಲು ವಿರೋಧ ಪಕ್ಷಗಳ ಉಪನಾಯಕಿಯಾಗಿದ್ದರು. 1952ರಿಂದ 1987ರವರೆಗೂ(1977ರ ಚುನಾವಣೆ ಬಿಟ್ಟು) ನಡೆದ ಎಲ್ಲಾ ಚುನಾವಣೆಗಳಲ್ಲಿ ವಿಜೇತರಾಗಿದ್ದಾರೆ.

ವಿ.ವಿಶ್ವನಾಥಮೆನನ್

ಇದು ಮೊದಲ ಭಾರಿಗೆ ವಿಧಾನ ಸಭೆಗೆ ಆಯ್ಕೆಯಾಗಿದ್ದರೂ ಲೋಕ ಸಭೆ ಮತ್ತು ರಾಜ್ಯ ಸಭೆಯ ಸದಸ್ಯರಾಗಿ ಕೆಲಸ ಮಾಡಿದ ಸಂಸದೀಯ ಪಟು, ಎರ್ನಾಕುಂ ಜಿಲ್ಲೆ ತ್ರಿಪುಣಿತರ ಕ್ಷೇತ್ರದಿಂದ ಆಯ್ಕೆಯಾಗಿದ್ದ ಇವರೂ ಸಿಪಿಐ [ಎಂ] ನ ರಾಜ್ಯ ಸಮಿತಿ ಸದಸ್ಯರಾಗಿದ್ದರು.

ಟಿ.ಶಿವದಾಸ್‌ಮೇನನ್

ಅಧ್ಯಾಪಕ ಸಂಘದ ಮುಖ್ಯ ಸಂಘಟಿತರಾಗಿದ್ದ ಇವರು ಸಿ.ಪಿ.ಐ. (ಎಂ) ನ ಪಾಲ್ಘಾಟ್ ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿ ಸದಸ್ಯ, ಕ್ಯಾಲಿಕಟ್ ವಿ ವಿ.ಯ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಇದೇ ಮೊದಲ ಬಾರಿಗೆ ಮಲಪುಜ್ಹ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾದರು.

ಸರ್ಕಾರದ ಮೊದಲ ಕಾರ್ಯಕ್ರಮಗಳು

1 ನಾರು, ಕೈಮಗ್ಗ, ಗೋಡಂಬಿ ಮೊದಲಾದ ಸಾಂಪ್ರದಾಯಕ ಉದ್ಯಮಗಳಲ್ಲಿ ಕೆಲಸ ಮಾಡುವ ಜನರಿಗೆ ಪೆನ್‌ಶನ್ ಪದ್ಧತಿ.

2 ಮೀನು ಸಿಗದೆ ಸಂಕಷ್ಟದಲ್ಲಿರುವ ಮೀನುಗಾರರಿಗೆ ಎರಡು ವಾರದ ಉಚಿತ ಆಹಾರ ಧಾನ್ಯಗಳು.

3 ಕಂದಾಯ ವಸೂಲಾತಿ ಹಾಗೂ ಗೇಣಿದಾರರಿಗೆ ನೀಡಿದ ಜಮೀನುಗಳ ಕಂತುಗಳನ್ನು ಕಟ್ಟುವುದನ್ನು ನಿಲ್ಲಿಸುವುದು.

4 ರೈತರಿಗೆ ಭೂಅಭಿವೃದ್ಧಿ ಬ್ಯಾಂಕ್ ಸಾಲವಸೂಲಾತಿ ಮುಂದೂಡಿಕೆ.

5 ಕುಡಿಯುವ ನೀರು ಸರಬರಾಜಿಗಾಗಿ 15 ಕೋಟಿ ರೂ ಹಣ ಮೀಸಲು.

6 ಲಕ್ಷಾಂತರ ಶಿಕ್ಷಕರು, ವಿದ್ಯಾರ್ಥಿಗಳು ಕರುಣಾಕರನ್ ಸರ್ಕಾರಕ್ಕೆ ಮಾಡಿದ ಪ್ರತಿಭಟನೆ ನೆನೆಪಿಸಬಹುದು. ಆ ಪ್ರೀಯುನಿವರ್ಸಿಟಿ ಬೋರ್ಡ್‌ರದ್ಧಿಯಾತಿ.

ರಾಜ್ಯಪಾಲರ ಭಾಷಣ

ಎಡ ಪ್ರಜಾಸತ್ತಾತ್ಮಕ ರಂಗ ಏನು ಮಾಡುತ್ತದೆ ?

ಇತ್ತೀಚಿನ ಕೇರಳ ವಿಧಾನ ಸಭಾ ಚುನಾವಣೆಯಲ್ಲಿ ಸಿ.ಪಿ.ಐ.[ಎಂ] ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಪ್ರಚಂಡ ಗೆಲುವು ಸಾಧಿಸಿದ ನಂತರ ಮಾರ್ಚ್ 28ರಂದು ವಿಧಾನ ಸಭೆಯ ಪ್ರಥಮ ಅಧಿವೇಶನ ನಡೆಯಿತು. ರಾಜ್ಯಪಾಲ ಶ್ರೀ ಪಿ. ರಾಮಚಂದ್ರನ್ ಅವರು ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಸರ್ಕಾರ ಕೈಗೊಳ್ಳಲಿರುವ ಧೋರಣೆಗಳ ಬಗ್ಗೆ ವಿವರಿಸಿದರು. ನಿತ್ಯೋಪಯೋಗೀ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿದ್ದು ಅವುಗಳು ಜನಸಾಮಾನ್ಯರಿಗೆ ಎಟುಕುವಂತೆ ಮಾಡುವುದೇ ಸರ್ಕಾರದ ತುರ್ತು ಕರ್ತವ್ಯವಾಗಿದೆಯೆಂದು ತಿಳಿಸಿದರು. ವಿಷಮಗೊಳ್ಳುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಅತ್ಯಂತ ತುರ್ತಾಗಿ ಕ್ರಮ ಕೈಗೊಳ್ಳುವುದಾಗಿಯೂ ಕಾನೂನು ಮತ್ತು ಶಿಸ್ತು ಪಾಲನೆಯನ್ನು ವ್ಯವಸ್ಥಿತಗೊಳಿಸುವುದಾಗಿ ಮತ್ತು ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸುವುದಾಗಿಯೂ ಅವರು ತಮ್ಮ ಭಾಷಣದಲ್ಲಿ ತಿಳಿಸಿದರು. ಸರ್ಕಾರ ಕೈಗೊಳ್ಳಲಿರುವ ಇತರ ಅಂಶಗಳು ಹೀಗಿವೆ :

1. ಪಂಚಾಯತ್, ಮುನಿಸಿಪಾಲಿಟಿ ಚುನಾವಣೆಗಳನ್ನು ಕೂಡಲೇ ನಡೆಸುವುದು
2. ಜಿಲ್ಲಾ ಮಂಡಳಿಗಳ ನಿಯಮವನ್ನು ಜ್ಯಾರಿಗೊಳಿಸುವುದು
3. ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಗಮನ
4. ಸಾಂಪ್ರದಾಯಿಕ ಕೃಷಿಯನ್ನು ಅಭಿವೃದ್ಧಿಗೊಳಿಸುವುದು
5. ಮುಚ್ಚಲ್ಪಟ್ಟಿರುವ ಕಾರ್ಖಾನೆಗಳನ್ನು ತೆರೆಯುವುದು
6. ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತರುವುದು
7. ಭ್ರಷ್ಟಾಚಾರವನ್ನು ತಡೆಗಟ್ಟುವುದು
8. ಕಾರ್ಮಿಕರ ಹಿತವನ್ನು ಸಂರಕ್ಷಿಸುವುದು
9. ಪೆನ್‌ಷನ್ ಸೌಲಭ್ಯವನ್ನು ವಿಸ್ತರಿಸುವುದು
10. ಮೀಸಲಾತಿ ನೀತಿಯನ್ನು ಈಗಿರುವಂತೆಯೇ ಮುಂದುವರಿಸುವುದು

○

ಕೇರಳದಲ್ಲಿ ಸಿ. ಪಿ. ಐ. (ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗದ ಸರಕಾರ ಪ್ರಮಾಣವಚನ ಸ್ವೀಕರಿಸಿದೆ. ಈ ಸಂಪುಟದ ಸಚಿವರುಗಳ ಒಂದು ಪರಿಚಯ

ಈ ರಂಗದ ಗೆಲುವು ಎಲ್ಲೆಲ್ಲಿ? **(2ನೇ ಪುಟದಲ್ಲಿ ಬಾಕ್ಸ್ ನೋಡಿ)**

ವಿ.ಜೆ. ತಂಗಪ್ಪನ್

1983ರಲ್ಲಿ ಹಿಂದೆ ಕರುಣಾಕರನ್ ಎರಡು ಕಡೆಯಿಂದ ಆಯ್ಕೆಯಾಗಿ ರಾಜೀನಾಮೆ ನೀಡಿದ ನೇಮಕ ಕ್ಷೇತ್ರದಿಂದ ಅದರ ಹಿಂದೆಯೇ ನಡೆದ ಉಪ ಚುನಾವಣೆಯಲ್ಲಿ ಆಡಳಿತ ಪಕ್ಷದ ಅಭ್ಯರ್ಥಿಯನ್ನು ಸೋಲಿಸಿ ಮೊತ್ತ ಮೊದಲ ಬಾರಿಗೆ ವಿಧಾನ ಸಭೆಗೆ ಆಯ್ಕೆಯಾದ ತಂಗಪ್ಪನ್‌ರವರು ವೃತ್ತಿಯಲ್ಲಿ ವಕೀಲರು. ಕಿಸಾನ್ ಸಭಾದ ಜಿಲ್ಲಾ ಪದಾಧಿಕಾರಿಗಳು.

ಟಿ.ಕೆ. ಹಂಸ

ಸಿ.ಪಿ.ಐ. [ಎಂ) ಬೆಂಬಲಿತ ಅಭ್ಯರ್ಥಿಯಾಗಿ 1982 ನಿಲಂಬೂರ್‌ನಿಂದ ಕಾಂಗ್ರೆಸ್ [ಐ] ಅಭ್ಯರ್ಥಿಯನ್ನು ಸೋಲಿಸಿ ವಿಧಾನ ಸಭಾ ಸದಸ್ಯರಾದ ಕಾಂ. ಹಂಸ ಈ ಬಾರಿ ಸಿ.ಪಿ.ಐ.(ಎಂ) ಅಭ್ಯರ್ಥಿಯಾಗಿ ಬೇಪೂರ್ ಕ್ಷೇತ್ರದಿಂದ ಚುನಾಯಿತರಾಗಿದ್ದಾರೆ. ಹಿಂದೆ ಮಲಪ್ಪುರಾ ಕಾಂಗ್ರೆಸ್ (ಐ) ಜಿಲ್ಲಾ ಸಮಿತಿ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಸರ್ವಾಧಿಕಾರಿ ಪ್ರವೃತ್ತಿಯನ್ನು ವಿರೋಧಿಸಿ ಎಡ ಪ್ರಜಾಸತ್ತಾತ್ಮಕ ರಂಗವನ್ನು ಸೇರಿದರು.

ಕೇರಳದ ಮಂತ್ರಿಗಳು

1	ಮುಖ್ಯಮಂತ್ರಿ ಇ.ಕೆ. ನಾಯನಾರ್, ಪಕ್ಷ : ಸಿಪಿಐ (ಎಂ)	—ಗೃಹ —ಸಾರ್ವಜನಿಕ ಆಡಳಿತ —ಯೋಜನೆ, ಪರಿಸರ,
2	ಆರ್.ಗೌರಿಯಮ್ಮ, ಪಕ್ಷ : ಸಿ.ಪಿ.ಐ. [ಎಂ]	– ಕೈಗಾರಿಕೆ – ಎಕ್ಸೈಸ್ – ವಿಜಿಲೆನ್ಸ್ –ಸಮಾಜ ಕಲ್ಯಾಣ –ಭೂಕಂದಾಯ
3	ಪಿ. ಎಸ್. ಶ್ರೀನಿವಾಸನ್, ಪಕ್ಷ : ಸಿ.ಪಿ.ಐ.	–ಪ್ರವಾಸೋದ್ಯಮ
4	ಕೆ. ಚಂದ್ರಶೇಖರನ್, ಪಕ್ಷ : ಜನತಾ	–ಸಾರ್ವಜನಿಕ ವಿದ್ಯಾಭ್ಯಾಸ –ಉನ್ನತ ವಿದ್ಯಾಭ್ಯಾಸ ಕಾನೂನು ಸಚಿವ
5	ಷಣ್ಮುಖದಾಸ್, ಪಕ್ಷ : ಕಾಂಗ್ರೆಸ್ (ಎಸ್)	–ಆರೋಗ್ಯ ಖಾತೆ ಬಂದರುಗಳು
6	ಬೇಬಿ ಜಾನ್, ಪಕ್ಷ : ಆರ್.ಎಸ್.ಪಿ.	–ಜಲಮಂಡಲಿ
7	ಟಿ.ಕೆ. ರಾಮಕೃಷ್ಣನ್, ಪಕ್ಷ : ಸಿ.ಪಿ.ಐ. [ಎಂ]	–ಸಹಕಾರ, ಮೀನುಗಾರಿಕೆ ಸಂಸ್ಕೃತಿ ಇಲಾಖೆ
8	ವಿ. ವಿಶ್ವನಾಥಮೆನನ್, ಪಕ್ಷ : ಸಿ.ಪಿ.ಐ.[ಎಂ]	–ಆರ್ಥಿಕ ಸಚಿವ ಮುಜರಾಯಿ ಇಲಾಖೆ
9	ಎ. ನೀಲಲೋಹಿತದಾಸ್ ನಾಡಾರ್, ಪಕ್ಷ : ಲೋಕದಳ	–ವಾರ್ತಾಇಲಾಖೆ ಯುವಜನ ಸೇವೆ, ಕ್ರೀಡೆ ಮೃಗಾಲಯಗಳು, ಮ್ಯೂಸಿಯಂಗಳು
10	ವಿ. ಚಂದ್ರಶೇಖರನ್ ನಾಯರ್, ಪಕ್ಷ: ಸಿ.ಪಿ.ಐ.	–ಆಹಾರ, ನಾಗರಿಕ ಸರಬರಾಜು ಪಶುಸಂಗೋಪನೆ, ಹೈನು ಅಭಿವೃದ್ಧಿ
11	ಟಿ.ಕೆ. ಹಂಸ, ಪಕ್ಷ : ಸಿಪಿಐ [ಎಂ]	–ಲೋಕೋಪಯೋಗಿ ಇಲಾಖೆ ವಕ್ಫ್ ಬೋರ್ಡ್
12	ಲೋನಪ್ಪನ್ ನಂಬಾಡನ್, ಪಕ್ಷ :ಸಿಪಿಐ (ಎಂ)	–ಗೃಹನಿರ್ಮಾಣ,
13	ಕೆ. ಪಂಕಜಾಕ್ಷನ್, ಪಕ್ಷ : ಆರ್.ಎಸ್.ಪಿ.	–ಕಾರ್ಮಿಕ, ಪುನರ್ವಸತಿ
14	ವಿ.ವಿ. ರಾಘವನ್, ಪಕ್ಷ : ಸಿ.ಪಿ.ಐ.	–ಕೃಷಿ
15	ಪಿ.ಕೆ.ರಾಘವನ್, ಸಿ.ಪಿ.ಐ.	–ಹರಿಜನ ಕಲ್ಯಾಣ ನೊಂದಾವಣೆ ರಿಜಿಸ್ಟ್ರೇಷನ್
16	ಕೆ. ಶಂಕರನಾರಾಯಣ ಪಿಳ್ಳೈ, ಕಾಂಗ್ರೆಸ್ (ಎಸ್)	-ಸಾರಿಗೆ
17	ಶಿವದಾಸ್ ಮೆನನ್, ಸಿ.ಪಿ.ಐ. (ಎಂ)	–ವಿದ್ಯುತ್, ಗ್ರಾಮೀಣ ಅಭಿವೃದ್ಧಿ
18	ವಿ.ಜೆ. ತಂಗಪ್ಪನ್, ಸಿ.ಪಿ.ಐ. [ಎಂ]	-ನಗರಾಭಿವೃದ್ಧಿ, ಪಂಚಾಯತ್‌ರಾಜ್ಯ
19	ಎಂ.ಪಿ. ವೀರೇಂದ್ರ ಕುಮಾರ್, ಜನತಾ ಪಕ್ಷ	-ಅರಣ್ಯ, ವನ್ಯ ಜೀವಿ ಸಂರಕ್ಷಣೆ

ಲೋನಪ್ಪನ್ ನಂಬಾಡನ್

1980ರ ಎಡ ಪ್ರಜಾಸತ್ತಾತ್ಮಕ ರಂಗದಲ್ಲಿ ಸೋಷಲಿಸ್ಟ್ ಕೇರಳ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿ ಸಾರಿಗೆ ಸಚಿವರಾಗಿದ್ದ ಇವರು ಈ ಬಾರಿ ಸಿ.ಪಿ.ಐ. [ಎಂ] ಬೆಂಬಲಿತ ಅಭ್ಯರ್ಥಿಯಾಗಿ ಆಯ್ಕೆಗಿದ್ದಾರೆ. ಈಗತನ್ನ ಪಕ್ಷವನ್ನು ತ್ಯಜಿಸಿ ಸಿ.ಪಿ ಐ. [ಎಂ] ಶಾಸಕಾಂಗ ವಿಭಾಗವನ್ನು ಸೇರಿದ್ದಾರೆ.

ಚಂದ್ರಶೇಖರನ್ ನಾಯರ್

ಇಡೀ ದೇಶದಲ್ಲಿ ಪ್ರಸಿದ್ಧಿ ಪಡೆದ "ಮಾವೇಲಿ" ಅಂಗಡಿಗಳ ಸರಣಿಯ ಶಿಲ್ಪಿ ಕಾರ್ಮಿಕರ ನಾಯಕ.

ವಿ.ವಿ. ರಾಘವನ್

ಕಾರ್ಮಿಕ ರಂಗದಿಂದ ಬಂದ ಪ್ರಸಿದ್ಧ ನಾಯಕ, ಭೂಗತರಾಗಿ, ಹಾಗೂ ಬಂಧನದಲ್ಲಿದ್ದು ಕಷ್ಟ ಪಟ್ಟ ಜೀವಿ, ಸಿ.ಪಿ.ಐ. ನ ಕೇಂದ್ರ ಪರಿಷತ್ತಿನ ಸದಸ್ಯ ಸಿಪಿಐ ನ ಕಾರ್ಯದರ್ಶಿ ಮಂಡಳಿ ಸದಸ್ಯ.

ಪಿ. ಕೆ.ರಾಘವನ್

ಮಾಜಿ ಮಂತ್ರಿ ಈಗ ಸಿಪಿಐ ರಾಜ್ಯ ಸಮಿತಿ ಸದಸ್ಯ, ಕೃಷಿ ಕೂಲಿಕಾರರ ರಾಜ್ಯ ಅಧ್ಯಕ್ಷ.

ಜ್ಯೋತಿ ಬಸುರವರೊಂದಿಗೆ ಸಂದರ್ಶನ

ಎಡರಂಗದಲ್ಲಿ ನೀವೊಬ್ಬರೇ ಸಮರ್ಥ ವ್ಯಕ್ತಿಯೆಂಬ ಪ್ರಧಾನಿಯವರ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಮೊದಲು ಅವರು ಈ ವ್ಯತ್ಯಾಸವನ್ನು ಕೂಡ ಮಾಡಿರಲಿಲ್ಲ. (ಅಂದರೆ ಎಡರಂಗದಲ್ಲಿ ಸಮರ್ಥರು ಯಾರೂ ಇಲ್ಲ ಎಂದೇ ಪ್ರಧಾನಿಪ್ರಚಾರಮಾಡುತ್ತಿದ್ದರು-ಐಕ್ಯರಂಗ) ನಂತರ ಮಾತ್ರ ಯಾರೂ ಅವರಿಗೆ ನನ್ನನ್ನು ವೈಯಕ್ತಿಕವಾಗಿ ಹೀಗಳೆಯಲು ಹೋಗ ಬೇಡಿ ಎಂದು ಬುದ್ಧಿವಾದ ಹೇಳಿದರು. ಪತ್ರಿಕೆಗಳೂ ಸಹ ನನ್ನ ನಂತರ ಸಿ.ಪಿ.ಐ. (ಎಂ) ಎಂಬ ಪಕ್ಷವೇ ಇರುವುದಿಲ್ಲ ಎಂದು ಹೇಳುತ್ತಿವೆ. ದೊಡ್ಡ ಜನ ವಿಭಾಗಗಳೂ ಇದನ್ನು ನಂಬುತ್ತಿವೆ. ಆದರೆ ಇದೆಲ್ಲಾ ಸುಳ್ಳು ಅಷ್ಟೇ.

ಪ. ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ [ಐ] ಗೆ ಆಗಿರುವ ಪರಾಭವ ದೇಶದ ರಾಜಕೀಯದಲ್ಲಿ ವಿರೋಧ ಪಕ್ಷಗಳ ಮರುಹೊಂದಾಣಿಕೆ ಹೇಗಾಗಬಹುದೆಂದು ನಿಮ್ಮ ನಿರೀಕ್ಷೆ? ನಿಶ್ಚಿತ ಅವಧಿಯೊಳಗೆ ವಿರೋಧ ಪಕ್ಷಗಳ ಐಕ್ಯತೆ ತರುವುದೆಂದು ನಿಮಗೆ ಅನ್ನಿಸುತ್ತಿದ್ದೆಯೇ?

ಜ್ಯೋತಿ ಬಸು

ಈ ಬಗ್ಗೆ ನಮ್ಮ ಪಕ್ಷದೊಳಗೆ ಈಗಾಗಲೇ [ಅಂದರೆ ಚುನಾವಣೆಗಳ ಮೊದಲೂ ಸಹ] ಚರ್ಚಿಸುತ್ತಿದ್ದೇವೆ. ಕನಿಷ್ಟ ಸಾಮಾನ್ಯ ಕಾರ್ಯಕ್ರಮದ ಆಧಾರದ ಮೇಲೆ ಬೂರ್ಜ್ವಾ ಪಕ್ಷಗಳು ಸೇರಿದಂತೆ, ವಿರೋಧ ಪಕ್ಷಗಳನ್ನು ಒಗ್ಗೂಡಿಸಿ, ಕೇಂದ್ರದಲ್ಲಿ ಒಂದು ಬದಲಿ ರೂಪಿಸಬೇಕೆಂದು ನಮ್ಮ ಅಭಿಪ್ರಾಯ. ಜಾತ್ಯತೀತತೆ, ಸಮಾಜವಾದ, ಮತ್ತು ಪ್ರಜಾಪ್ರಭುತ್ವಕ್ಕೆ ಬದ್ಧವಾಗಿರುವವಿರೋಧ ಪಕ್ಷಗಳ ಐಕ್ಯತೆ ಇಂತಹ ಸಾಮಾನ್ಯ ಕಾರ್ಯಕ್ರಮದ ಆಧಾರದ ಮೇಲೆ ಸಾಧ್ಯ. ನಮ್ಮ ಪಕ್ಷದ ಅಧಿವೇಶನಗಳೂ ದೇಶದ ಜನತೆಗೆ ಕಾಂಗ್ರೆಸ್ (ಐ) ನ ಪರಾಭವದ ಸಂದರ್ಭದಲ್ಲೂ ಇದನ್ನೇ ನಾನು ಹೇಳಬಯಸುತ್ತೇನೆ.

ಪ್ರ: ವಿರೋಧ ಪಕ್ಷಗಳಲ್ಲಿ ಐಕ್ಯತೆ ಮೂಡಿಸಲು ವೇಳಾಪಟ್ಟಿ ಅಥವಾ ಸಮನ್ವಯ ಸಮಿತಿ ಏನಾದರೂ ಇದೆಯೆ.

ಜ್ಯೋತಿಬಸು

ಅಂತಹುದೇನೂ ಇಲ್ಲ. ಕೆಲವು ಚರ್ಚೆಗಳಂತೂ ನಡೆದೇ ನಡೆಯುತ್ತವೆ. ನಮ್ಮ ಪಕ್ಷದ ಕೇಂದ್ರ ಸಮಿತಿ ತನ್ನ ಏಪ್ರಿಲ್ 9ರ ಸಭೆಯಲ್ಲಿ ಚರ್ಚಿಸುತ್ತದೆ. ಈಗಾಗಲೇ ಉಳಿದ ಪಕ್ಷಗಳ ನಾಯಕರು ಈ ದಿಕ್ಕಿನಲ್ಲಿ ಆಶಾದಾಯಕವಾಗುವ ಹೇಳಿಕೆ ಕೊಟ್ಟಿದ್ದಾರೆ.

ಪ್ರ : 60ರ ದಶಕದಲ್ಲಿ ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗದ ಅನುಭವದ ಆಧಾರದ ಮೇಲೆ ಜಾತ್ಯತೀತ ವಿರೋಧ ಪಕ್ಷಗಳು ಕೇಂದ್ರದಲ್ಲಿ ಒಂದಾಗುವ ಪರಿಸ್ಥಿತಿ ಇದೆಯೆ? ಎರಡನೆಯ ಮಹಾಯುದ್ಧದ ನಂತರ ಫ್ರಾನ್ಸ್ ಮತ್ತು ಇಟಲಿಗಳಲ್ಲಿ ಬಂದಂತಹ ಜನಪ್ರಿಯ ಮಿಶ್ರ ಸರಕಾರಗಳು ಭಾರತದಲ್ಲೂ ಬರಬಹುದು ಅನ್ನಿಸುತ್ತದಯೆ?

ಜ್ಯೋತಿಬಸು

ಪರಿಸ್ಥಿತಿಯಂತೂ ಇಂತಹುದಕ್ಕೆ ನಿಸ್ಸಂದೇಹವಾಗಿ ಪಕ್ವವಾಗಿದೆ. ಕಾಂಗ್ರೆಸ್ ಪಕ್ಷದ ಸರ್ಕಾರದ ಆರ್ಥಿಕ ಸಾಮಾಜಿಕ ನೀತಿಗಳು, ಹಾಳುಗೆಡವುತ್ತಿವೆ.

ಆದ್ದರಿಂದಲೇ ಕೇಂದ್ರದಲ್ಲಿ ಬದಲಿಯ ಅವಶ್ಯಕತೆಒದಗಿರುವುದು. ಇಂತಹ ಪರಿಸ್ಥಿತಿ ಜನಪ್ರಿಯ ಮಿಶ್ರ ಸರ್ಕಾರಕ್ಕೆ ದಾರಿ ಮಾಡಿಕೊಡಬಹುದೆ ಎಂದು ನಾನು ಹೇಳಲಾರೆ. ಇಂತಹ ಸರ್ಕಾರ ಬರುವ ಪರಿಸ್ಥಿತಿಯಂತೂ ಇದೆ. ಆದರೆ ಯಾವಾಗ, ಹೇಗೆ ಬರಬಹುದು ಎಂದು ಹೇಳುವುದು ಕಷ್ಟ. ಎಲ್ಲರೂ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು. ನಮ್ಮ ಪಕ್ಷ ಸಹ ಈ ಪ್ರಯತ್ನಗಳಿಗೆ ಪೂರ್ಣ ಬೆಂಬಲ ಕೊಡುತ್ತದೆ. ತುರ್ತು ಪರಿಸ್ಥಿತಿ ನಂತರದ ಜನತಾ ಪ್ರಯೋಗದ ದಿನಗಳಿಗಿಂತ, ಇಂದಿನ ರಾಜಕೀಯ ಪರಿಸ್ಥಿತಿ ಭಿನ್ನವಾಗಿದೆ.

ಪ್ರ : ಕಲ್ಕತ್ತಾ ಮಹಾ ನಗರದಲ್ಲಿ ನಿಮ್ಮ ಪಕ್ಷಕ್ಕೆ ಇಷ್ಟೊಂದು ಕೆಟ್ಟ ಫಲಿತಾಂಶ ಬರಲು ಕಾರಣವೇನು?

ನನಗನಿಸುತ್ತದೆ ವಾರ್ತಾಪತ್ರಿಕೆಗಳು; ದಿನಬೆಳಗಾದರೆ ಸಂಜೆಯಾದರೆ ನಮ್ಮನ್ನು ಹೀಗೆಳೆಯುತ್ತಾ ಸಾಕಷ್ಟು ತೊಂದರೆಯನ್ನು ಮಾಡಿದವು. ಟಿ.ವಿ.ಯ ಅಪಪ್ರಚಾರವೂ ತನ್ನದೇ ಆದ ಪರಿಣಾಮ ಬೀರಿತು. ○

ಅತಿ ದೊಡ್ಡ ಅಂತರ

ಪ. ಬಂಗಾಳದ ವಿಧಾನ ಸಭೆ ಚುನಾವಣೆಯಲ್ಲಿ ಅತ್ಯಂತ ಹೆಚ್ಚಿನ ಅಂತರ (43,326) ಬರ್‌ದ್ವಾನ್ ಜಿಲ್ಲೆಯ ಔಸ್‌ಗ್ರಾಮ (ಮೀಸಲು) ಕ್ಷೇತ್ರದ ಸಿ.ಪಿ.ಐ (ಎಂ) ಅಭ್ಯರ್ಥಿಗೆ ದೊರಕಿದೆ.

ಒಟ್ಟು ಮತಗಳು	1,24,068
ಚಲಾಯಿಸಿದ ಮತಗಳು	95,266
ಶ್ರೀಧರ ಮಲಿಕ್ ಸಿ.ಪಿ.ಐ.(ಎಂ)	65,611
ಬಿಶ್ವಂಬರ್ ಮಂಡಲ್ ಕಾಂಗ್ರೆಸ್(ಐ)	22,285
ನಿಹಾರ್ ಹಜ್ರಾ (ಪಕ್ಷೇತರ)	5,984

ಜ್ಯೋತಿ ಬಸು ವಿಜಯ

ಸತ್‌ಗಾಚಿಯಾ ಕ್ಷೇತ್ರದಿಂದ ಮುಖ್ಯಮಂತ್ರಿ ಜ್ಯೋತಿ ಬಸು ವಿಜಯ ಸುಲಭ ಸಾಧ್ಯವಲ್ಲ. ನಕ್ಸಲೈಟ್ ನಾಯಕ ಸಂತೋಷ ರಾಣಾ ಮುಸ್ಲಿಂ ಲೀಗ್ ಬೆಂಬಲದಿಂದ ಭಾರಿ ಸವಾಲೊಡ್ಡಿದ್ದಾರೆ ಎಂದು ಬೂರ್ಜ್ವಾ ಪತ್ರಿಕೆಗಳು ಪ್ರಚಾರ ನಡೆಸಿದ್ದವು. ಕಾಂಗ್ರೆಸ್(ಐ)ನ ಮುಸ್ಲಿಂ ಅಭ್ಯರ್ಥಿ ಪರವಾಗಿ ಕೋಮು ಪ್ರಚೋದನೆಯನ್ನೂ ಮುಕ್ತವಾಗಿ ಬಳಸಲಾಗಿತ್ತು. ಈ ಸವಾಲಿನ 'ಅವಸ್ಥೆ' ನೋಡಿ.

ಒಟ್ಟು ಮತಗಳು	1,11,42
ಚಲಾಯಿಸಿದ ಮತಗಳು	91,09
ಜ್ಯೋತಿ ಬಸು ಸಿ.ಪಿ.ಐ.(ಎಂ)	51,13
ಅಮ್ಜದ್ ಅಲಿ ಕಾಂಗ್ರೆಸ್(ಐ)	35,33
ಸಂತೋಷ ರಾಣಾ ಸಿ.ಪಿ.ಐ(ಎಂ.ಎಲ್)	2,66

ಎರಡನೇ ಅತಿ ದೊಡ್ಡ ಅಂತರ-ಕಾ| ಬಿನೋಯ ಚೌಧ

ಎರಡನೆಯ ಅತಿದೊಡ್ಡ ಅಂತರದಿಂದ ಕಾ|| ಬಿನೋಯ ಚೌಧರಿ (ಮಂ ಮಂಡಲದಲ್ಲಿ ಎರಡನೆ ಸ್ಥಾನ) ಯವರು ಬರ್‌ದ್ವಾನ್ ಉತ್ತರ ಕ್ಷೇತ್ರದಿ ಆರಿಸಿ ಬಂದಿದ್ದಾರೆ.

ಒಟ್ಟು ಮತಗಳು	1,39,4
ಚಲಾಯಿಸಿದ ಮತಗಳು	1,01,4
ಬಿನೋಯ ಕೃಷ್ಣ ಚೌಧರಿ(ಸಿ.ಪಿ.ಐ.-ಎಂ)	65,9
ಸಂತೋಷ ಸಿಕದರ್ ಕಾಂಗ್ರೆಸ್(ಐ)	33,1
ಅನಿಲ್ ಕುಮಾರ್ ಚೌಧರಿ (ಲೋಕದಳ)	2

ಜಿಲ್ಲಾವಾರು ಫಲಿತಾಂಶ

ಜಿಲ್ಲೆ	ಒಟ್ಟು ಸ್ಥಾನಗಳು	ಸಿ.ಪಿ.ಎಂ.	ಫಾರ್ವಡ್ ಬ್ಲಾಕ್	ಆರ್.ಎಸ್.ಪಿ.	ಸಿ.ಪಿ.ಐ.	ಎಡರಂಗ (ಇತರ)	ಎಡರಂಗ ಒಟ್ಟು	ಕಾಂಗ್ರೆಸ್ (ಐ)	ಇತರರು
ಕೂಚ್‌ಬಿಹಾರ್	9	4	5	–	–	–	9	–	–
ಜಲಪೈಗುರಿ	12	6	1	4	–	–	11	1	–
ದಾರ್ಜಿಲಿಂಗ್	5	4	–	–	1	–	5	–	–
ಪ. ದಿನಾಜ್‌ಪುರ	12	6	2	3	1	–	12	–	–
ಮಾಲ್ದಾ	11	9	1	–	–	–	10	1	–
ಮುರ್ಶಿದಾಬಾದ್	19	8	–	5	1	1	15	4	–
ನಾಡಿಯಾ	15	13	–	–	–	1	14	1	–
ಉತ್ತರ 24ಪರಗಣ	28	20	2	1	–	–	23	4	1
ದಕ್ಷಿಣ 24ಪರಗಣ	25	19	–	2	–	–	21	2	2
ಕಲ್ಕತ್ತ	24	9	–	1	–	–	10	14	–
ಹೌರಾ	16	8	3	–	–	–	11	5	–
ಮಿಡ್ನಾಪುರ	37	23	–	–	7	3	35	2	–
ಹೂಗ್ಲಿ	19	14	3	–	–	1	18	1	–
ಪುರುಲಿಯಾ	11	8	3	–	–	–	11	–	–
ಬಂಕುರಾ	13	10	1	1	1	–	13	–	–
ಬರ್‌ದ್ವಾನ್	26	21	1	–	–	1	23	3	–
ಬಿರ್‌ಭೂಮ	12	5	4	1	–	–	10	2	–
ಒಟ್ಟು	294	187	26	18	11	9	251	40	3

ವಿಜಯೋತ್ಸವದಲ್ಲಿ ಕಾ|| ಜ್ಯೋತಿಬಸು

"ತಮ್ಮ ಇತಿಹಾಸ ನಿರ್ಮಿಸುವ ಶಕ್ತಿ ನಮ್ಮ ಜನಕ್ಕೆ ಇದೆ ಎಂಬುದರಲ್ಲಿ ನಮಗೆ ಪೂರ್ತಿ ವಿಶ್ವಾಸವಿದೆ........ಇತಿಹಾಸ ಕೊಟ್ಟಿರುವ ಈ ಹೊಸ ಮಹಾ ಕಾರ್ಯವನ್ನು ಪೂರ್ತಿಗೊಳಿಸಲು ನಾವು ಪ್ರಯತ್ನಿಸುತ್ತೇವೆ. ನಿಮ್ಮ ಎಲ್ಲಾ ತಪ್ಪುಗಳನ್ನು ತಿದ್ದಿಕೊಳ್ಳುತ್ತೇವೆ. ನಿಮ್ಮ ಎಲ್ಲಾ ಟೀಕೆಗಳಿಗೆ ಸ್ವಾಗತವಿದೆ. ನಿಮ್ಮ ಪಕ್ಷದ ಸಂಗಾತಿಗಳಿಗೆ ಇದನ್ನು ತಿಳಿಸಿ ನಿಮ್ಮ ಟೀಕೆಗಳನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ."

"ಕೆಂಪು ಕೋಟೆಯ ಮೇಲೆ ಈ ಹಿಂದೆ ಧಾಳಿ ನಡೆಸಿ ಗೆಲ್ಲ ಬಯಸಿದ ನಾಜಿಗಳ ಫ್ಯಾಸಿಸ್ಟರ ಗತಿ ಏನಾಯಿತೆಂದು ನಮ್ಮ ಪ್ರಧಾನ ಮಂತ್ರಿಗಳಿಗೆ ತಿಳಿದಿದೆಯೇ?"

ಕಾ| ಸರೋಜ ಮುಖರ್ಜಿ

"ನೀವು ನಮಗೆ ಬೆಂಬಲ ಕೊಡುತ್ತೀರೆಂದು ನಮಗೆ ಭರವಸೆ ಇತ್ತು. ಆದರೆ ಈ ಪ್ರಮಾಣದಲ್ಲಿ ಮಾಡಬಹುದು ಎಂದು ನಾವು ಎಣಿಸಿರಲಿಲ್ಲ...."

"ಕಾಂಗ್ರೆಸ್[ಐ]ಈಗಲೂ ಶೇಕಡಾ 28–30ರಷ್ಟು ಮತಗಳಿಸುತ್ತದೆ ಎಂದು ನಾವು ಮರೆಯದಿರೋಣ. ಇದಕ್ಕೆ ನಾವು ಕಾರಣ ಹುಡುಕಬೇಕು."

ಚುನಾವಣೆಯ ನಂತರ ಕಾಂಗ್ರೆಸ್ [ಐ] ಗೂಂಡಾಗಿರಿ

ಚುನಾವಣೆಯ ದಿನ ಹಾಗೂ ನಂತರ ಸೋಲಿನ ಹತಾಶೆಯಿಂದ ಕಾಂಗ್ರೆಸ್ (ಐ) ಕಾರ್ಯಕರ್ತರು ಗೂಂಡಾಗಿರಿಯಲ್ಲಿ ತೊಡಗಿದ್ದಾರೆ. ಮಾತ್ರವಲ್ಲದೆ ಈ ಹಿಂಸಾಚಾರ ಮುಚ್ಚಿಡಲು, ವಿಜಯೋನ್ಮಾದದಿಂದ ಸಿ.ಪಿ ಎಂ. ಕಾರ್ಯಕರ್ತರು ಹಿಂಸಾಚಾರಕ್ಕಿಳಿದಿದ್ದಾರೆ ಎಂದು ಪ್ರಚಾರ ಮಾಡುತ್ತಿದ್ದಾರೆ. ದೊಡ್ಡ ಬೂರ್ಜ್ವಾ ಪತ್ರಿಕೆಗಳು ಇದೇ ರೀತಿ ವರದಿ ಮಾಡಿವೆ.

ಚುನಾವಣೆಯ ದಿನವೇ ಕಾಂಗ್ರೆಸ್ (ಐ) ರಾಜ್ಯಕಾರ್ಯದರ್ಶಿ ಸುಬ್ರತ ಮುಖರ್ಜಿ ಎರಡು ರಿವಾಲ್ವರ್‌ಗಳೊಡನೆ ಓಡಾಡುತ್ತಿದ್ದ. ತನ್ನ ಕ್ಷೇತ್ರದ ಹಲವು ಮತಗಟ್ಟೆಗಳಿಗೆ ಈ ಮಹಾನುಭಾವ ನೂರಾರು ಸಶಸ್ತ್ರ ಸಮಾಜಘಾತುಕ ವ್ಯಕ್ತಿಗಳನ್ನು ಕರೆದುಕೊಂಡು ಹೋಗುತ್ತಿದ್ದುದು ವರದಿಯಾಗಿದೆ. ಅಲ್ಲದೆ ಆ ಕ್ಷೇತ್ರದ 7 ಮತಗಟ್ಟೆಗಳಲ್ಲಿ ಕಾಂಗ್ರೆಸ್(ಐ) ಮರು ಮತದಾನ ಕೇಳಿದಾಗ, ಯಾವುದೇ ಚುನಾ

[6ನೇ ಪುಟ ನೋಡಿ]

ಯಶಸ್ವಿ ಮಹಿಳೆಯರ ಸಭೆ

ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯಿಂದ ದಿನಾಂಕ 5-4-87 ರಂದು ಬೆಂಗಳೂರಿನಲ್ಲಿ 2 ಗಂಟೆಗೆ ಎನ್.ಜಿ.ಓ. ಹಾಲ್‌ನಲ್ಲಿ ಮಹಿಳೆಯ ಸಭೆ ಕರೆಯಲಾಗಿತ್ತು.

'ರಾಷ್ಟ್ರೀಯ ಸಮಗ್ರತೆ ಹಾಗೂ ಮಹಿಳೆಯರ ಪಾತ್ರದ' ಕುರಿತು ಶ್ರೀಮತಿ ಸುಶೀಲಮ್ಮನವರು ಪ್ರಬಂಧ ಮಂಡಿಸಿ, ಅನಾದಿಕಾಲದಿಂದಲೂ ಮಹಿಳೆ ಕುಟುಂಬವನ್ನು ರಕ್ಷಿಸುವುದರ ಜೊತೆ ದೇಶವನ್ನು ರಕ್ಷಿಸಬೇಕಾದ ಜವಾಬ್ದಾರಿ ಮಹಿಳೆಯರ ಮೇಲೆ ಇರುವುದರಿಂಗಿ, ಅದಕ್ಕೆ ಸಂಘಟನೆ ಅವಶ್ಯವೆಂದು ತಿಳಿಸಿದರು. 'ಮಹಿಳೆಯರ ಸಮಸ್ಯೆ ಹಾಗೂ ಅದಕ್ಕೆ ಪರಿಹಾರ'ದ ಕುರಿದು ಮಾತನಾಡಿದ ಶ್ರೀಮತಿ ವಿಮಲಾರವರು, ಕೃಷಿ ಕೂಲಿಕಾರರ, ದುಡಿಯುವ ಮಹಿಳೆಯರ ಹಾಗೂ ಎಲ್ಲಾ ವರ್ಗಗಳಲ್ಲಿಯ ಮಹಿಳೆಯರ ಸಮಸ್ಯೆ ವಿವರಿಸಿ, ಇಂಥ ಸಮಸ್ಯೆಗಳು ಹುಟ್ಟಿಕೊಳ್ಳಲು ಕಾರಣ, ಸಂಘಟನೆ ಅವಶ್ಯಕತೆ ತಿಳಿಸಿ. ಮಹಿಳಾ ಸಂಘಟನೆ ದುಡಿಯುವ ವರ್ಗದೊಡನೆ ಗುರ್ತಿಸಿಕೊಂಡು ಹೋಗಬೇಕಾಗಿದೆಂದು ತಿಳಿಸಿದರು.

ಈ ಮಹಿಳಾ ಸಂಘಟನೆಯ ಕೇಂದ್ರ ಸಮಿತಿ ಸದಸ್ಯೆ ಹಾಗೂ ರಾಯಚೂರು ಕಾರ್ಯದರ್ಶಿಗಳಾದ ಶ್ರೀಮತಿ ಹರಿಣಿ ಕಕ್ಕೇರಿಯವರು ಮಾತನಾಡುತ್ತಾ ಮಹಿಳಾ ಸಂಘಟನೆಯ ಧ್ಯೇಯ ಧೋರಣೆಗಳ ಕುರಿತು ತಿಳಿಸುತ್ತಾ, ವರದಕ್ಷಿಣೆ, ಮಹಿಳೆಯರ ಮೇಲೆ ಕುದುರೆ ಮೋತಿಯಂಥ ದೌರ್ಜನ್ಯದ ಪ್ರಕರಣಗಳು ನಡೆದಾಗ ಅವುಗಳ ವಿರುದ್ಧ ನಡೆದ ಹೋರಾಟಗಳನ್ನು ವಿವರಿಸುತ್ತ ಪಾಳೆಯಗಾರಿ ಮೌಲ್ಯಗಳ ವಿರುದ್ಧ ಜಾತೀವಾದಿ, ಕೋಮುವಾದಿ ಶಕ್ತಿಗಳ ವಿರುದ್ಧ ಸಂಘಟಿತರಾಗಿ ಮಹಿಳೆ ರಾಜಕೀಯ ತಿಳುವಳಿಕೆ ಹೊಂದಿ ಈ ಭ್ರಷ್ಟ ಸಮಾಜ ವ್ಯವಸ್ಥೆಯ ವಿರುದ್ಧ ಹೋರಾಡಬೇಕೆಂದು ಕರೆ ಕೊಟ್ಟರು.

ಶ್ರೀಮತಿ ಕುರ್ಶಿತಾಬೇಗಂರವರು ಸಂಘಟನೆ ಬಲಪಡಿಸಿದರೆ ಮಹಿಳೆಯ ಸಮಸ್ಯೆಗಳಿಗೂ ಪರಿಹಾರ ಕಂಡು ಹಿಡಿಯಬಹುದೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ರಾಜಮ್ಮನವರು ಮಾತನಾಡುತ್ತಾ ಪದ್ಮಲತಾ ಪ್ರಕರಣವನ್ನು ಖಂಡಿಸಿದರು.

ಪ್ರಾರಂಭದಲ್ಲಿ ಶಾಂತಕುಮಾರಿಯವರಿಂದ ಸ್ವಾಗತ ಹಾಗೂ ಶ್ರೀಮತಿಯವರಿಂದ ವಂದನಾರ್ಪಣೆ ಮಾಡಲಾಯಿತು. ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ○

ಕಾಂಗ್ರೆಸ್ (ಐ) ಗೂಂಡಾಗಿರಿ

[5ನೇ ಪುಟದಿಂದ]

ಆಯೋಗ ವಿಚಾರಣೆ ನಡೆಸದೆ ಇದಕ್ಕೆ ಒಪ್ಪಿಕೊಂಡಿತು.

ಚುನಾವಣೆಯ ದಿನ ದಾರ್ಜಿಲಿಂಗ್‌ನ ಈಗಾಗಲೇ ಕೊಲೆಯಾಗಿರುವ ಕಾ|| ಡಿ.ಎಂ. ಮೊಹ್ರಾರ ಪತ್ನಿ, ಮತ್ತು ಪುತ್ರಿಯನ್ನು ಗೂಂಡಾಗಳು ಕದ್ದೊಯ್ದಿದ್ದಾರೆ. 24ಪರಗಣ ಜಿಲ್ಲೆಯಲ್ಲಿ ಮಹಿಳಾ ಕಾರ್ಯಕರ್ತೆಯೊಬ್ಬರ ಕೊಲೆಯಾಗಿದ್ದರೆ,ಇನ್ನೊಬ್ಬ ಮಹಿಳಾ ಕಾರ್ಯಕರ್ತೆ ತೀವ್ರವಾಗಿ ಗಾಯಗೊಂಡಿದ್ದಾರೆ. ಹೌರಾದ ಜಗತವಲ್ಲಭಪುರದ ಎಂ.ಎಲ್.ಎ ಕಾ|| ಅನ್ಸರ್ ಉದ್ದೀನ್ ಮತ್ತು ಉತ್ತರ ಬಂಗಾಳದ ಫಲಕಾಟದ ಎಂ. ಎಲ್. ಎ ಕಾ|| ಜೊಗೇನ್ ಸಿಂಗ ರಾಯ ಇವರ ಮೇಲೆ ಕಾಂಗ್ರೆ ಗೂಂಡಾಗಳು ಹಲ್ಲೆ ನಡೆಸಿದ್ದಾರೆ. ಬಿರ್‌ಭೂಮ ಜಿಲ್ಲೆಯಲ್ಲಿ ವಿಜಯೋತ್ಸವ ಮೆರವಣಿಗೆಯ ಮೇಲೆ ಗೂಂಡಾಥಾಳಿ ನಡೆದಿದೆ.

ಈ ಎಲ್ಲಾ ಪ್ರಚೋದನೆಗಳ ನಡುವೆ ಶಾಂತವಾಗಿ ಶಿಸ್ತಿನಿಂದ ವರ್ತಿಸಿದ ಎಡರಂಗದ ಕಾರ್ಯಕರ್ತರು ಮತ್ತು ಜನತೆಗೆ ಕಾ|| ಜ್ಯೋತಿ ಬಸು ಅಭಿನಂದನೆ ಸಲ್ಲಿಸಿದ್ದಾರೆ. ಕೋಮು ಪ್ರಚೋದನೆ ನಡೆಸಲು ಪ್ರಯತ್ನಿಸುತ್ತಿರುವ ಎರಡು ಉರ್ದು ದಿನಪತ್ರಿಕೆಗಳ ಬಗ್ಗೆ ಜಾಗ್ರತೆಯಿಂದಿರುವಂತೆ ಅವರು ಜನತೆಯನ್ನು ಎಚ್ಚರಿಸಿದ್ದಾರೆ. ಇದರಲ್ಲಿ ಒಂದು ಪತ್ರಿಕೆಯ ಸಂಪಾದಕನಿಗೆ ರಾಜೀವ್‌ಗಾಂಧಿಯ ಜತೆ ಸಂಪರ್ಕವಿದೆ ಎಂದು ಹೇಳಲಾಗಿದೆ.

(5ನೇ ಪುಟದಿಂದ)

ಸಿ.ಪಿ.ಐ [ಎಂ] ಮಂತ್ರಿಗಳು

ಬಂಡವಾಳಶಾಹಿ ಜಗತ್ತಿನಲ್ಲೇ ವಿಕ್ರಮ ಸಾಧಿಸಿರುವ ಪ.ಬಂಗಾಳದ ಎಡರಂಗ ಮೂರನೇ ಬಾರಿ ಅಧಿಕಾರ ಸ್ವೀಕರಿಸಿದೆ. ಕಾ| ಜ್ಯೋತಿಬಸು ಮೂರನೇ ಬಾರಿ ಮುಖ್ಯಮಂತ್ರಿ ಅಧಿಕಾರ ಸ್ವೀಕರಿಸಿದ್ದು, ತಮ್ಮ ಮಂತ್ರಿಮಂಡಲ ರಚಿಸಿದ್ದಾರೆ. ಎಡರಂಗ ಮಂತ್ರಿಮಂಡಲದ ಸಂಖ್ಯಾಬಲವನ್ನು 44ರಿಂದ 30ಕ್ಕಿಳಿಸಲು ನಿರ್ಧರಿಸಿದೆ. 1982ರಲ್ಲಿ ಸಿ.ಪಿ.ಐ.(ಎಂ) 34ಮಂತ್ರಿಗಳನ್ನು ಹೊಂದಿದ್ದು, ಈ ಬಾರಿ ಇದನ್ನು 20ಕ್ಕೆ ಇಳಿಸಲು ನಿರ್ಧರಿಸಿದೆ. ಸಿ.ಪಿ.ಐ.(ಎಂ) ಮಂತ್ರಿಗಳ ಪಟ್ಟಿ ಈ ಕೆಳಗಿನಂತಿದೆ.

1. ಜ್ಯೋತಿ ಬಸು –ಮುಖ್ಯಮಂತ್ರಿ
2. ಬಿನೋಯ ಚೌಧರಿ –ಮಂತ್ರಿ
3. ಬುದ್ಧದೇಬ್ ಭಟ್ಟಾಚಾರ್ಯ ”
4. ಪ್ರಶಾಂತ ಸೂರ್ ”
5. ಅಸೀಮ ದಾಸಗುಪ್ತ ”
6. ಪ್ರಬೀರ್ ಸೇನ್‌ಗುಪ್ತ ”
7. ಕಾಂತಿ ಬಿಸ್ವಾಲ್ ”
8. ಅಬ್ದುಲ್ ಕಯಾಮ್ ಮೊಲ್ಲಾ ”
9. ಸುಭಾಷ್ ಚಕ್ರವರ್ತಿ ”
10. ಶ್ಯಾಮಲ್ ಚಕ್ರವರ್ತಿ ”
11. ಅಚಿಂತ್ಯ ಕೃಷ್ಣರಾಯ ”
12. ಮಹಮ್ಮದ್ ಅಬ್ದುಲ್ ಬಾರಿ ”
13. ದಿನೇಶ್ ಡಾಕುವಾ ”
14. ಅಂಬರೀಶ್ ಮುಖರ್ಜಿ ”
15. ಛಾಯಾ ಬೆರಾ [ಮಹಿಳೆ] ”
16. ಪ್ರಭಾಶ್ ಫಡೀಕರ್ –[ರಾಜ್ಯಮಂತ್ರಿ]
17. ತಮಂಗ್ ದಾವಾ ಲಾಮ ” [ದಾರ್ಜಿಲಿಂಗ್‌ನಿಂದ ಚುನಾಯಿತರಾದವರು]
18. ಅಬ್ದುಲ್ ರಜ್ಜೂಕ್ ಮೊಲ್ಲಾ ”
19. ಮಹೇಶ್ವರ್ ಮುರ್ಮು ”
20. ಬನಮಾಲಿ ರಾಯ್ ”

ಸ್ಪೀಕರ್–ಹಸೀನ್ ಅಬ್ದುಲ್ ಹಲೀಂ

ಮುಖ್ಯ ಸಚೇತಕ–ನಿರಂಜನ ಮುಖರ್ಜಿ

ಡಿ. ವೈ. ಎಫ್. ಐ. ನ ವಾರ್ಷಿಕ ಮಹಾಸಭೆ

ದಿನಾಂಕ 1-3-1987ರಂದು ವಿರಾಜಪೇಟೆ ನಗರದ ಡಿ.ವೈ.ಎಫ್.ಐ ಘಟಕದ ಸರ್ವ ಸದಸ್ಯರ ಸಭೆಯು ಸ್ಥಳೀಯ ಕರ್ನಾಟಕ ಸಂಘದಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಶ್ರೀ ಕೆ.ವಿ. ಹ್ಯಾರೀಸ್‌ರವರು ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಎಸ್.ಎಫ್.ಐ. ರಾಜ್ಯ ಸಮಿತಿಯ ಸಹ ಕಾರ್ಯದರ್ಶಿಯವರಾದ ಕಾಂ. ಬೈಯ್ಯರೆಡ್ಡಿಯವರು ಬಂದಿದ್ದು ತಮ್ಮ ಭಾಷಣದಲ್ಲಿ ದೇಶದ ಪ್ರತಿಯೊಂದು ಭಾಗದಲ್ಲಿಯೂ ವಿಚ್ಛಿದ್ರಕಾರಿಗಳು ದೇಶವನ್ನು ಒಡೆಯಲು ಪ್ರಯತ್ನ ಪಡುತ್ತಿರುವ ಈ ಸಂದರ್ಭದಲ್ಲಿ ಯುವಜನಾಂಗ ದೇಶದ ಐಕ್ಯತೆಯನ್ನು ಕಾಪಾಡಲು ಒಂದಾಗಬೇಕಾಗಿದೆ ಎಂದರು. ಸಭೆಯಲ್ಲಿ ರಾಜ್ಯ ಸಮಿತಿ ಸದಸ್ಯರಾದ ಕಾಂ. ಸ್ಟ್ಯಾನ್ಲಿವಾಜ್ ಮತ್ತು ತಾಲ್ಲೂಕು ಅಧ್ಯಕ್ಷರಾದ ಕಾಂ. ಐ.ಆರ್. ಪ್ರಮೋದ್‌ರವರು ಉಪಸ್ಥಿತರಿದ್ದರು.

ಸಭೆಯು ದ.ಕ. ಜಿಲ್ಲೆಯ ಉಜಿರೆ ಕಾಲೇಜಿನ ವಿದ್ಯಾರ್ಥಿ ಪದ್ಮಲತಾ ಮತ್ತು ಆಕೆಯ ವಿದ್ಯಾರ್ಥಿ ಲೋಕಯ್ಯ ಪೂಜಾರಿಯವರ ದಾರುಣ ರೀತಿಯಲ್ಲಿ ಕಗ್ಗೊಲೆಯಾದ ಬಗ್ಗೆ ಖಂಡನೆ ವ್ಯಕ್ತಪಡಿಸಿ, ತಪ್ಪಿತಸ್ತರನ್ನು ಕೂಡಲೆ ಬಂಧಿಸಬೇಕೆಂದು ಸರ್ಕಾರವನ್ನು ಒತ್ತಾಯಸಲಾಯಿತು. ಹರಿಕೇರಿ ನಿವಾಸಿಗಳ ಜಾಗದ ಪಟ್ಟೆಯ ಬಗ್ಗೆ ಮತ್ತು ಹಸಿರು ಕಾರ್ಡ್ ವಿತರಣೆಯಲ್ಲಿಉಂಟಾಗಿರುವ ಅನ್ಯಾಯದ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸಲಾಗಿತು.

ನೂತನ ಸಾಲಿನ ಪದಾಧಿಕಾರಿಗಳಾಗಿ ಕೆ.ವಿ. ಹ್ಯಾರೀಸ್ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಟಿ.ಎನ್. ನಾಗೇಶ ಉಪಾಧ್ಯಕ್ಷೆಯಾಗಿ ಕುಮಾರಿ ಸರೋಜಿನಿ, ಜಂಟಿ ಕಾರ್ಯದರ್ಶಿಯಾಗಿ ಎಂ. ಚಂದ್ರಶೇಖರ್ ಮತ್ತು ಖಜಾಂಚಿಯಾಗಿ ಎಚ್. ರಾಜು ಇವರುಗಳನ್ನು ಆಯ್ಕೆ ಮಾಡಲಾಯಿತು.

ಪ್ರಾರಂಭದಲ್ಲಿ ಟಿ.ಎಚ್.ಖಾದರ್ ಸ್ವಾಗತಿಸಿದರು. ಕೊನೆಯಲ್ಲಿ ಟಿ.ಎಸ್. ನಾಗೇಶ್‌ರವರಿಂದ ವಂದನಾರ್ಪಣೆ ○

ಉಚಿತ ಭೋದನಾ ತರಗತಿ

ಎಸ್.ಎಫ್.ಐ. ವತಿಯಿಂದ ಕಳೆದ ಮೂರು ವರ್ಷಗಳಿಂದಲೂ ಅತ್ಯಂತ ಯಶಸ್ವಿಯಾಗಿ ಸಂಘಟಿಸಲ್ಪಡುತ್ತಿರುವ ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಬೋಧನಾ ತರಗತಿಗಳ ಸಮಾರೋಪ ಸಮಾರಂಭವನ್ನು ಸಹ ಏರ್ಪಡಿಸಲಾಗಿತ್ತು.

ಸರ್ಕಾರಿ ಜೂನಿಯರ್ ಕಾಲೇಜ್ ಪ್ರಾಂಗಣದಲ್ಲಿ ನಡೆದ ಬಹಿರಂಗ ಸಮಾರಂಭಕ್ಕೆ ವಾಸವಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀಯುತ ವೈ. ಭೀಮಾಸೇನಾಚಾರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಂತ ರೈತ ಸಂಘದ ಕಾರ್ಯ ಸಮಿತಿ ಸಹಕಾರ್ಯದರ್ಶಿ ಕಾಂ.ಪಿ. ಆರ್. ವೆಂಕಟೇಶ್‌ರವರು ಇಂದಿನ ಶಿಕ್ಷಣ ರಂಗದಲ್ಲಿನ ವಿರೋಧಾಭಾಸಗಳನ್ನು ಹೇಗೆ ಪ್ರತಿಬಿಂಬಿಸುತ್ತಿವೆ ಎಂಬುದನ್ನು ವಿವರಿಸಿದರು.

ಬೋಧನಾ ತರಗತಿಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು, ವಿಜೇತರಿಗೆ ಜೀವವಿಮಾ ನೌಕರರ ಸಂಘಟನೆ ನಾಯಕರಾದ ಕಾಂ. ಎ.ವಿ. ಮುಧೋಳರಿಂದ ಬಹುಮಾನ ವಿತರಣೆ ಹಾಗೂ ಕಾಂ. ಧರ್ಮಸಗೌಡರವರ ನಿರ್ದೇಶನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಮಾರಂಭದ ಅಂಗವಾಗಿ ನಡೆದವು. ಕಾಂ. ಯು. ನೀಲಕಂಠ ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ವಿದ್ಯಾರ್ಥಿಗಳು ಪಾಲಕರು ಬಹುಸಂಖ್ಯೆಯಲ್ಲಿ ಹಾಜರಿದ್ದರು.

ಭಗತ್‌ಸಿಂಗ್ ದಿನಾಚರಣೆ

ಸರ್ಕಾರೀ ಕಲಾ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕರಾದ ಶ್ರೀ ಟಿ ಎನ್. ವೆಂಕಟೇಶಮೂರ್ತಿಯವರು ದಿನಾಂಕ 23-3-1987 ರಂದು "ಭಾರತ ವಿದ್ಯಾರ್ಥಿ ಫೆಡರೇಷನ್" ಏರ್ಪಡಿಸಿದ್ದ "ಭಗತಸಿಂಗ್ ದಿನಾಚರಣೆ" ಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಭಗತ್ ಸಿಂಗ್‌ರ ಸಮಾಜವಾದಿ ಕನಸನ್ನು ನನಸಾಗಿಸಲು ಎಸ್.ಎಫ್.ಐ. ಶ್ರಮಿಸಲೆಂದು ಕರೆನೀಡಿದರು.

ಶ್ರೀ ಸಿ. ಯತಿರಾಜುರವರು ಭಗತ್ ಸಿಂಗ್ ರೂಪಿಸಲ್ಪಟ್ಟ ಚಾರಿತ್ರಿಕ ಸನ್ನಿವೇಶವನ್ನು ವಿವರಿಸಿದರು.

ಎಸ್. ಎಫ್. ಐ. ಸಂಚಾಲಕ ಉಮೇಶ್ ವಂದನಾರ್ಪಣೆಮಾಡಿದರು. ಸಭೆಯ ಪ್ರಾರಂಭದಲ್ಲಿ ಭಗತ್‌ಸಿಂಗ್ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿದ ವಿದ್ಯಾರ್ಥಿಗಳು ಅವರ "ಇಂಕ್ವಿಲಾಬ ಜಿಂದಾಬಾದ್" ಘೋಷಣೆಯನ್ನು ಮಾರ್ಧನಿಸಿ ಶ್ರದ್ಧಾಂಜಲಿಅರ್ಪಿಸಿದರು.

ಕೃಷಿ ಕಾರ್ಮಿಕರು – ಕೂಲಿ

(2ನೇ ಪುಟದಿಂದ)

ಆ ಪ್ರದೇಶದಲ್ಲಿ ಸುತ್ತ ಮುತ್ತಲಿನ ಜನರ ಕನಿಷ್ಠ ಕೂಲಿ ನೀಡಬೇಕಾದ ಒತ್ತಾಯಕ್ಕೊಳಗಾಗುತ್ತಾರೆ. ಜೊತೆಗೆ ವರ್ಷದಲ್ಲಿ ಕೆಲಸವಿಲ್ಲದ ಸಮಯದಲ್ಲೆಲ್ಲಾ ಕೆಲಸ ನೀಡಲು ಈ ಯೋಜನೆಗಳನ್ನು ಉಪಯೋಗಿಸುವಂತೆ ಹೋರಾಟದ ಮೂಲಕ ಒತ್ತಾಯ ತರಬೇಕು.

ಇದೇ ಸಮಯದಲ್ಲಿಯೇ ಹಣದ ಪ್ರಭಾವವನ್ನು ಕಡಿಮೆ ಮಾಡಲು "ಕೂಲಿಗಾಗಿ ಕಾಳು" ಯೋಜನೆಗಾಗಿ ಹಾಗೂ ಗ್ರಾಮೀಣ ಪ್ರದೇಶದಲ್ಲಿಯೂ ವ್ಯಾಪಕವಾಗಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಅಗ್ಗದ ದರದಲ್ಲಿ ಆಹಾರ ಧಾನ್ಯ ಇಂತಹ ಅವಶ್ಯಕ ವಸ್ತುಗಳ ಸರಬರಾಜಿಗಾಗಿ ಒತ್ತಾಯಿಸಬೇಕು.

ಕನಿಷ್ಠ ಕೂಲಿ,ತುಟ್ಟಿಭತ್ಯ,ವ್ಯಾಪಕವಾಗಿ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳ ಜಾರಿ–"ಕೂಲಿಗಾಗಿ ಕಾಳು" ಯೋಜನೆ–14 ಅವಶ್ಯಕ ವಸ್ತುಗಳ ವಿತರಣೆ ಇವು ಕಿಸಾನ್‌ಸಭಾದ 12 ಬೇಡಿಕೆಗಳ ಮುಖ್ಯಭಾಗವಾಗಿದೆ. ಅಷ್ಟೇ ಅಲ್ಲ ಕಲ್ಕತ್ತಾದಲ್ಲಿ ಸೇರಿದ 14 ವಿರೋಧ ಪಕ್ಷಗಳ 5ಮುಖ್ಯಮಂತ್ರಿಗಳ ಶೃಂಗ ಸಭೆಯ ಅಂಗೀಕೃತ ತೀರ್ಮಾನವೂ ಆಗಿದೆ. ●

ಸಮುದಾಯದ ಘಟಕ

ಹರಪನಹಳ್ಳಿ ಮತ್ತು ಹೂವಿನ ಹಡಗಲಿ ಸಮುದಾಯ ಘಟಕಗಳ ಸಹಕಾರದೊಂದಿಗೆ ಸೋಗಿಯಲ್ಲಿ ಇತ್ತೀಚೆಗೆ ಸಮುದಾಯ ಘಟಕ ಪ್ರಾರಂಭವಾಯಿತು. ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿ (ರಿ) ಬೆಂಗಳೂರು (ಕರ್ನಾಟಕ ರಾಜ್ಯ) ಇತರ ಕೇಂದ್ರ ಸಮಿತಿ ಸದಸ್ಯರೂ ಬೀದರ್ ಸಮುದಾಯ ಘಟಕದ ಕಾರ್ಯದರ್ಶಿಗಳೂ ಆದ ಶ್ರೀ ಬಸವರಾಜ್ ಕೊಡಗೆಯವರ ನಿರ್ದೇಶನದಲ್ಲಿ ದಿನಾಂಕ 23.3.87 ರಂದು 'ಬೆಲೆ ಏರಿಕೆ' ಬೀದಿ ನಾಟಕವನ್ನು ಯಶಸ್ವಿಯಾಗಿ ಪ್ರಯೋಗಿಸಲಾಯಿತು. ಸುಮಾರು [ಮೂರು ಸಾವಿರ ಜನ ನಾಟಕ ವೀಕ್ಷಿಸಿದರು.

ಸಮಾಜದ್ರೋಹಿಗಳಿಂದ ನಾಟಕಕ್ಕೆ ತಡೆ ಬಂದರೂ ಕೂಡಾ ಅಲ್ಲಿನ ಜನರೇ ಅದನ್ನು ತಡೆದು ನಾಟಕ ಮುಂದುವರಿಯಲು ಅವಕಾಶ ಮಾಡಿಕೊಟ್ಟರು. ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ●

"ಬದುಕಿಗಾಗಿ ಸಾಯುತ್ತೇನೆ"

ವಿಶ್ವ ಶಾಂತಿಗಾಗಿ ಅಮೇರಿಕನ್ ವಿಜ್ಞಾನಿಯ ಆಮರಣಾಂತ ಉಪವಾಸ

ವಾಷಿಂಗ್‌ಟನ್ ನಗರ, ಅಮೇರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರ ವಾಸಸ್ಥಾನವಾಗಿರುವ ಶ್ವೇತ ಭವನದ ಮುಂದಿರುವ ಲೆಫಾಯೆಟ್ ಉದ್ಯಾನ. ಭಾರಿ ಮೋಟಾರು ಕಾರೊಂದುಉದ್ಯಾನ ವನವನ್ನು ಪ್ರವೇಶಿಸುತ್ತದೆ. ಅದರ ಬಾಗಿಲು ತೆರೆದೊಡನೆ ಕ್ಷೀಣಕಾಯದ, ಎಲುಬಿನ ಹಂದರದಂತಿರುವ ವ್ಯಕ್ತಿಯೊಬ್ಬ ನಡುಗುವ ಮೈಹೊತ್ತು ಹೊರ ಬರುತ್ತಾನೆ. ಇಬ್ಬರು ಸಹಾಯಕರ ನೆರವಿನಿಂದ ಉದ್ಯಾನದೊಳಹೊಕ್ಕು ಅಲ್ಲಿ ತನಗಾಗಿ ಸಿದ್ಧವಾಗಿರುವ ತಾತ್ಕಾಲಿಕ ಹಾಸಿಗೆಯತ್ತ ಸಾಗುತ್ತಾರೆ. ಒಂದು ಕಾಲದಲ್ಲಿ ದೃಢಕಾಯನಾಗಿದ್ದ ಈ ವ್ಯಕ್ತಿ ಅಮೇರಿಕಾದ ಪ್ರಖ್ಯಾತ ಖಗೋಳ ಭೌತ ವಿಜ್ಞಾನಿ ಡಾ. ಚಾರ್ಲ್ಸ್ ಹೈದರ್. ಈತ ಇಪ್ಪತ್ತೊಂದನೇ ಶತಮಾನದೊಳಗಾಗಿ ಎಲ್ಲ ಅಣುಶಸ್ತ್ರಾಸ್ತ್ರಗಳನ್ನೂ ನಿರ್ಮೂಲಗೊಳಿಸಬೇಕೆಂಬ ಬೇಡಿಕೆಗಾಗಿ ಒತ್ತಾಯಿಸಿ ಆಮರಣಾಂತ ಉಪವಾಸ ಕೈಗೊಂಡಿದ್ದಾರೆ. ಅವರ ದೇಹ ಸ್ಥಿತಿ ನೋಡಿದರೆ ಬಹುಶಃ ಸಾವು ಸಮೀಪಿಸುವ ದಿನ ದೂರವಿಲ್ಲವೆನಿಸುತ್ತದೆ. ಚಾರ್ಲ್ಸ್ ಹೈದರ್ ಉಪವಾಸ ಆರಂಭಿಸಿದ ಬಳಿಕ ಈ ಆರು ತಿಂಗಳಲ್ಲಿ ಈವರೆಗೂ ಶ್ವೇತ ಭವನದಿಂದ ಸೌಜನ್ಯಕ್ಕಾದರೂ ಉಪವಾಸ ನಿಲ್ಲಿಸುವಂತೆ ಒಮ್ಮೆಯೂ ಕರೆಬಂದಿಲ್ಲ. ಅಮೇರಿಕನ್ ವಾರ್ತಾ ಮತ್ತು ಪ್ರಚಾರ ಮಾಧ್ಯಮ ಈಆಮರಣಾಂತ ಉಪವಾಸದ ಸುದ್ದಿಯನ್ನು ಸಂಪೂರ್ಣ ಮರೆ ಮಾಚಿದೆ. ಡಾ. ಹೈದರ್ ಅವರ ಹೋರಾಟಕ್ಕೆ ಅಮೇರಿಕಾದೊಳಗೆ ಯಾವುದೇ ಅಧಿಕೃತ ಪ್ರಚಾರ ದೊರೆಯದಂತೆ ನೋಡಿಕೊಳ್ಳಲಾಗಿದೆ.

ಹೈದರ್ ಅವರು 1981ರಲ್ಲಿ ಅಮೇರಿಕದ ಹಲವಾರು ವಿಜ್ಞಾನಿಗಳು ಒಂದಾಗಿ ಅಣುಬಾಂಬುಗಳ ವಿರುದ್ಧ ಕಾವಲು ಸಮಿತಿಯೊಂದನ್ನು ರಚಿಸಿ ಶ್ವೇತಭವನದ ಮುಂದಿರುವ ಲೆಫಾಯೆಟ್ ಉದ್ಯಾನದಲ್ಲಿ ಹಗಲು ರಾತ್ರಿಗಳೆನ್ನದೆ ಕಾವಲಿಡಲಾರಂಭಿಸಿದರು.

ಕ್ರಿ.ಶ. 2000ನೇ ವರ್ಷದೊಳಗಾಗಿ ಎಲ್ಲ ಅಣ್ವಸ್ತ್ರಗಳನ್ನು ನಿರ್ಮೂಲಗೊಳಿಸಲು ಅಮೇರಿಕಾ ಸಂಯುಕ್ತ ಸಂಸ್ಥಾನಗಳು ನಿಖರವಾದ ಕಾರ್ಯಕ್ರಮ ಹಾಕಿಕೊಳ್ಳಬೇಕು ಮತ್ತು ವಿದೇಶಗಳಲ್ಲಿ ಅದು ನಡೆಸುತ್ತಿರುವ ಸೈನಿಕ ಹಸ್ತಕ್ಷೇಪವನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ 23-9-1986 ರಿಂದ ಅವರು ಆಮರಣಾಂತಉಪವಾಸ ಪ್ರಾರಂಭಿಸಿದರು.

ಡಾ. ಹೈದರ್ ಉಪವಾಸನಿಲ್ಲಿಸಿ ವಿಶ್ವಶಾಂತಿ ಚಳುವಳಿಗಾಗಿ ದುಡಿಯಲು ತನ್ನ ಅಮೂಲ್ಯವಾದ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದು ಜಗತ್ತಿನ ಎಲ್ಲ ದೇಶಗಳಿಂದ ಸಾವಿರಾರು ಪತ್ರಗಳೂ, ತಂತಿ ಸಂದೇಶಗಳೂ ಅವರಿಗೆ ಪ್ರತಿದಿನ ಬರುತ್ತಿವೆ.

ಡಾ. ಹೈದರ್ ತಾನು ವಿಶ್ವದ 'ಬದುಕಿ'ಗಾಗಿಆತ್ಮ ಬಲಿದಾನ ಮಾಡುವುದು ಖಂಡಿತವೆಂದಿದ್ದಾರೆ. ಅಮೇರಿಕಾ ಮತ್ತು ಪ. ಯೂರೋಪಿನ ಅಧಿಕೃತ ಸಮೂಹ ಮಾಧ್ಯಮಗಳು ಡಾ. ಹೈದರ್ ಅವರ ಧೀರೋದಾತ್ತ ಹೋರಾಟಕ್ಕೆ ಏನೇನೂ ಪ್ರಚಾರ ನೀಡದಿರುವ ಹಿನ್ನೆಲೆಯಲ್ಲಿ ನ್ಯೂಯಾರ್ಕ್, ಕ್ಯಾಲಿಫೋರ್ನಿಯಾ ಮತ್ತಿತರ ಕಡೆ ಶಾಂತಿಚಳುವಳಿಗಾರರು ಖಾಸಗಿ ಬಾನುಲಿ ಕೇಂದ್ರಗಳನ್ನುಸ್ಥಾಪಿಸಿಅವರ ಹೋರಾಟಕ್ಕೆ ವ್ಯಾಪಕ ಪ್ರಚಾರ ನೀಡುತ್ತಿದ್ದಾರೆ. ವಿಶ್ವಶಾಂತಿ ಚಳುವಳಿಯಲ್ಲಿ ಇನ್ನೊಂದು ಅವಿಸ್ಮರಣೀಯ ಅಧ್ಯಾಯ.

'ಸೋವಿಯತ್ ಅಣುಸ್ಥಾವರಗಳು ಅಪಾಯರಹಿತ' ಅಮೇರಿಕನ್ ಪರಣಿತರ ಅಭಿಪ್ರಾಯ

ಸೋವಿಯತ್ ಒಕ್ಕೂಟದಲ್ಲಿರುವ ಅಣು ವಿದ್ಯುತ್ ಸ್ಥಾವರಗಳು ಅತ್ಯಂತ ಸುಭದ್ರ ಸ್ಥಿತಿಯಲ್ಲಿರುವುದೆಂದೂ ಅವು ಅಪಾಯರಹಿತವಾಗಿದೆಯೆಂದೂ ಮಾರ್ಚ್ ತಿಂಗಳಲ್ಲಿ ಸೋವಿಯತ್‌ಒಕ್ಕೂಟದಲ್ಲಿನ ವಿವಿಧ ಅಣುಶಕ್ತಿ ಸ್ಥಾವರವನ್ನು ಸಂದರ್ಶಿಸಿದ ಅಮೇರಿಕನ್ ಅಣು ವಿಜ್ಞಾನಿಗಳ ತಂಡವೊಂದು ಅಭಿಪ್ರಾಯ ಪಟ್ಟಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನದ ಅಣುಶಕ್ತಿಕಮಿಷನ್‌ನ ಉಪಾಧ್ಯಕ್ಷ ಡಾ! ಫ್ರೆಡರಿಕ್‌ಬರ್ಲ್ ಅವರ ನೇತೃತ್ವದ ಈ ತಂಡವು ಚೆರ್ನೋಬಿಲ್ ಸ್ಥಾವರವನ್ನೂ ಪರಿಶೀಲಿಸಿ ಅಲ್ಲಿ ಅಣುವಿಕಿರಣದ ಪ್ರಮಾಣ ತೀರಾ ನಿಕೃಷ್ಟ ಮಟ್ಟದಲ್ಲಿದೆಯೆಂದು ಒಂದನೇ ಮತ್ತುಎರಡನೇ ರಿಯಾಕ್ಟರುಗಳ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವುಗಳ ವಿಕಿರಣ ಪ್ರಮಾಣ ಸಾಮಾನ್ಯ ಮಟ್ಟದಲ್ಲೇ ಇದೆಯೆಂದೂ ಹೇಳಿದೆ. ಕಳೆದ ವರ್ಷ ಎಪ್ರಿಲ್ ತಿಂಗಳಲ್ಲಿ ಅಘಘಾತ ಉಂಟಾದ ಬಳಿಕ ಚೆರ್ನೋಬಿಲ್ ಸ್ಥಾವರದ ಸುತ್ತಮುತ್ತಲಿನ 30ಕಿಲೋಮೀಟರ್ ವ್ಯಾಪ್ತಿಯ ಪ್ರದೇಶದ ಆಚೆ ಜನಜೀವನ ಸಾಮಾನ್ಯವಾಗಿದೆಯೆಂದೂ ಮತ್ತು ಅಲ್ಲಿನ ಜನಸಾಂದ್ರತೆಯಲ್ಲಿ ಏನೂ ಕಡಿಮೆಯಾಗಿಲ್ಲವೆಂದೂ ಈ ತಂಡ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದೆ.

ಈ ವರ್ಷ ಸೋವಿಯತ್‌ಒಕ್ಕೂಟದ ಪರಣಿತರ ತಂಡವೊಂದು ಅಮೇರಿಕಾಕ್ಕೆ ಸಂದರ್ಶನ ನೀಡಿ 1970ರ ದಶಕದಲ್ಲಿ ಭೀಕರ ಅಪಘಾತಕ್ಕೆ ಒಳಗಾಗಿದ್ದ 'ತ್ರೀಮೈಲ್‌ದ್ವೀಪ'ದ ಅಣು ವಿದ್ಯುತ್ ಸ್ಥಾವರವನ್ನು ಪರಿಶೀಲಿಸುವುದೆಂದೂ ವರದಿಯಾಗಿದೆ.

ಒಬ್ಬ ಚದುರಂಗ ಸಾರ್ವಭೌಮನ ದುರಂತ ಕತೆ

ಎರಡನೇ ಮಹಾಯುದ್ಧದ ನಂತರ ಈ ನಲವತ್ತೆರಡು ವರ್ಷಗಳಲ್ಲಿ ಚದುರಂಗದಾಟದಲ್ಲಿ ಮೈಖೆಲ್‌ಟಾಲ್, ಟ್ರೈಗಾನ್‌ಪೆಟ್ರೋಶಿಯನ್, ಬೋರಿಸ್ ಸ್ಪಾಸ್ಕಿ,ಅನತೋಲಿ ಕಾರ್ಪೋವ್ ಮತ್ತೀಗ ಗ್ಯಾರಿ ಕಾಸ್ಪರೋವ್ ಹೀಗೆ ವಿಶ್ವ ಚಾಂಪಿಯನ್‌ಗಳಾಗುತ್ತಿರುವವರು ಸೋವಿಯತ್ ಒಕ್ಕೂಟದ ಚದುರಂಗ ಪಟುಗಳೇ, ಸೋವಿಯತ್ ಒಕ್ಕೂಟದ ಈ ಪ್ರಾಬಲ್ಯಕ್ಕೆ ಸವಾಲೆಸೆದ ಬೇರೆ ದೇಶದ ಒಬ್ಬನೇ ಕ್ರೀಡಾಳುವೆಂದರೆ ಅಮೇರಿಕಾದ ಬಾಬ್ಬಿಫಿಶರ್. ಫಿಶರ್ ಆಗಿನ ವಿಶ್ವಚಾಂಪಿಯನ್ ಆಗಿದ್ದ ಬೋರಿಸ್‌ಸ್ಪಾಸ್ಕಿಯ ವಿರುದ್ಧ ಉಜ್ವಲವಾದ ಆಟವಾಡಿ ವಿಶ್ವಚಾಂಪಿಯನ್ ಕಿರೀಟವನ್ನು ತಾನು ಗಳಿಸಿದ. ಇದು ನಡೆದದ್ದು 1972ರಲ್ಲಿ.

ವಿಶ್ವಚಾಂಪಿಯನ್ ಆದೊಡನೆ ಬಾಬ್ಬಿಫಿಶರ್ ಜಗತ್ತಿನ ಆಕರ್ಷಣೆಯ ಕೇಂದ್ರವಾದ.ಮಿಲಿಯಾಂತರ ಡಾಲರುಗಳ ಹಣ ಆತನ ಕಾಲಬುಡದಲ್ಲಿ ಬೀಳಲಾರಂಭಿಸಿತು. ಅಮೇರಿಕದ ಅಧ್ಯಕ್ಷರಿಂದ ತೊಡಗಿ ರಾಜಕಾರಣಿಗಳು,ರಾಜಕುಮಾರರು ಮತ್ತು ಪ್ರಖ್ಯಾತ ಸಿನೆಮಾ ತಾರೆಯರು ಫಿಶರ್‌ನ ಗೆಳೆತನಕ್ಕಾಗಿ ಹಾತೊರೆದರು. ಆದರೆ ಪ್ರಖ್ಯಾತಿಯ ತುತ್ತತುದಿಗೇರಿದ ಈ ಚದುರಂಗ ಪಟು ಒಮ್ಮಿಂದೊಮ್ಮೆಗೇ ಕುಸಿದು ಅನಾಮಧೇಯನಾಗಿಬಿಟ್ಟ. ಆಮೇಲೆ ನಡೆದದ್ದೇನು?

ಅಂತರಾಷ್ಟ್ರೀಯ ಚದುರಂಗದಾಟದಿಂದ ಕಣ್ಮರೆಯಾದ ಫಿಶರ್ 'ವರ್ಲ್ಡ್‌ವೈಡ್ ಚರ್ಚ್ ಆಫ್ ಗಾಡ್' ಎಂಬ ಧಾರ್ಮಿಕ ಮೂಲಭೂತವಾದಿ ಸಂಸ್ಥೆಯ ಸದಸ್ಯನಾದ. ಈ ಸಂಸ್ಥೆಯ ಗುರು ಹರ್ಬರ್ಟ್ ಆರ್ಮ್‌ಸ್ಟ್ರಾಂಗ್ ಎಂಬಾತ 1975ರಲ್ಲಿ ಪ್ರಳಯವಾಗಿ ಸೃಷ್ಟಿಯು ನಾಶವಾಗುತ್ತದೆಂದು ಹೇಳಿದುದನ್ನು ಬಾಬ್ಬಿ ಫಿಶರ್ ಸಂಪೂರ್ಣ ನಂಬಿದ ಮತ್ತು ತನ್ನ ಗಳಿಕೆಯಲ್ಲಿ 61,000 ಡಾಲರ ಹಣವನ್ನು ಹರ್ಬರ್ಟ್ ಆರ್ಮ್‌ಸ್ಟ್ರಾಂಗ್‌ನ ಧಾರ್ಮಿಕ ಸಂಘಕ್ಕೆ ದಾನ ನೀಡಿದ. 1975ರಲ್ಲಿ ಸೋವಿಯತ್ ಕ್ರೀಡಾಳು ಅನತೋಲಿ ಕಾರ್ಪೋವ್ ವಿಶ್ವಚಾಂಪಿಯನ್‌ಪದವಿಗಾಗಿ ಸವಾಲೆಸೆದಾಗ ಬಾಬ್ಬಿಫಿಶರ್ ಈ ಪಂದ್ಯಾಟಕ್ಕೆ ಹಾಜರಾಗಲೇ ಇಲ್ಲ. ಇನ್ನು ಕೆಲವೇ ದಿನಗಳಲ್ಲಿ ಪ್ರಳಯವಾಗುತ್ತದಲ್ಲ; ಹಾಗಾಗಿ ವಿಶ್ವಚಾಂಪಿಯನ್ ಪದವಿಯಾಕೆ? ಎನ್ನುವ ಹುಚ್ಚುತನವನ್ನು ಧಾರ್ಮಿಕ ಮೂಲಭೂತವಾದಿಗಳು ಅವನ ತಲೆಯಲ್ಲಿ ತುಂಬಿಸಿ ಬಿಟ್ಟಿದ್ದರು. ಆದರೆ 1975ರಲ್ಲಿ ಪ್ರಪಂಚ ವಿನಾಶವಾಗಲಿಲ್ಲ. ಹರ್ಬರ್ಟ್ ಆರ್ಮ್‌ಸ್ಟ್ರಾಂಗ್‌ನ 'ವರ್ಲ್ಡ್ ಚರ್ಚ್ ಆಫ್ ಗಾಡ್'ವಿವಾದಗಳ ಕೇಂದ್ರವಾಗಿ ಬಾಬ್ಬಿಫಿಶರ್ ಅದಕ್ಕೆ ದಾನ ನೀಡಿದ್ದ ಹಣ ಹಿಂತಿರುಗಿ ಪಡೆಯಲು ಫಿಶರ್ ಮಾಡಿದ ಪ್ರಯತ್ನ ವ್ಯರ್ಥವಾಯಿತು.

ಕಳೆದ ಹತ್ತು ವರ್ಷಗಳಿಂದ ಈ ಚದುರಂಗದಾಟದ ಪ್ರತಿಭಾಶಾಲಿ ಕ್ರೀಡಾಳು ಅಜ್ಞಾತವಾಸವಾಗಿದ್ದಾನೆ. ಕೊಳೆತು ನಾರುತ್ತಿರುವ ಅಮೇರಿಕನ್ ಸಮಾಜ ಫಿಶರ್‌ನನ್ನು ಅಧಃಪತನದ ಕೂಪಕ್ಕೆ ತಳ್ಳಿದೆ.ಆತ ತನ್ನ ಹೆಸರನ್ನು ರಾಬರ್ಟ್ ಡಿ. ಜೇಮ್ಸ್ ಎಂಬುದಾಗಿ ಬದಲಾಯಿಸಿಕೊಂಡದ್ದೇ ಅಲ್ಲದೆ ಒಮ್ಮೊಮ್ಮೆ ಕಪ್ಪು ಕನ್ನಡಕ ಅಥವಾ ಮಾರುವೇಷ ಧರಿಸಿಕೊಂಡು ಸುತ್ತಾಡುತ್ತಾನೆ. ದಟ್ಟದಾರಿದ್ರ್ಯದಲ್ಲಿ ಒದ್ದುಕಿರುವ ಈತ ಈಗಲೂ ಯಹೂದ್ಯರು ಮತ್ತು ಸೈತಾನನ ಜೊತೆ ಸೇರಿಕೊಂಡು ರಶ್ಯನರು ತನ್ನ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆಂಬ ಭ್ರಮೆಯಲ್ಲಿದ್ದಾನೆ. ತನ್ನ ನಿಜವಾದ ಹೆಸರನ್ನು ಮರೆಮಾಚಿ ಪೋಲೀಸರ ಕೈಯಲ್ಲಿಸಿಕ್ಕಿ ಹಾಕಿಕೊಂಡು ನರಳುತ್ತಿದ್ದಾನೆ.ಫಿಶರ್‌ನ ಮಾಜಿ ಸ್ನೇಹಿತರು ಹೇಳುವಂತೆ ಆತ ಎಷ್ಟು ಬಲಪಂಥೀಯನಾಗಿದ್ದಾನೆಂದರೆ ಅವನಿಗೂ ಫ್ಯಾಸಿಸ್ಟರಿಗೂ ಏನೂ ವ್ಯತ್ಯಾಸವಿಲ್ಲ.

ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ರಾಷ್ಟ್ರಗಳ ಕ್ರೀಡಾಪಟುಗಳು ಅಲ್ಲಿನ ಗೌರವಾನ್ವಿತ ಪ್ರಜೆಗಳಾಗಿ ರಾಷ್ಟ್ರನಿರ್ಮಾಣದ ಕಾರ್ಯಗಳಲ್ಲಿ ತಮ್ಮನ್ನು ರಚನಾತ್ಮಕವಾಗಿ ತೊಡಗಿಸಿಕೊಳ್ಳುತ್ತಿದ್ದರೆ ರೋಗಗ್ರಸ್ತವಾದ ಅಮೇರಿಕದ ಈ ಮಹಾನ್ ಕ್ರೀಡಾಪಟು ಮನೋವೈಕಲ್ಯದಿಂದ ನರಳುವ ರೋಗಿಯಾಗಿದ್ದಾನೆ. ಇದು ಮುಕ್ತ ಸಮಾಜವೆಂದು ಅಟ್ಟಹಾಸಗೈಯುತ್ತಿರುವ ಬಂಡವಾಳಶಾಹಿ ರಾಷ್ಟ್ರಗಳ ದುರಂತವಲ್ಲವೇ?

(ಮೂಲ : ಲಿಜ್‌ಹಾಗ್‌ಸನ್ - ಕಂಪಾಸ್‌ಸ್ಪೋರ್ಟ್ಸ್)

ತಮಿಳುನಾಡು :

ಡಿ. ವೈ. ಎಫ್. ಐ. 4ನೇ ರಾಜ್ಯ ಸಮ್ಮೇಳನ

ಬ್ರಿಟೀಷರನ್ನು ಹೊಡೆದೋಡಿಸುವುದರಲ್ಲಿ ತ್ಯಾಗ ಬಲಿದಾನಕ್ಕೆ ಸಿದ್ಧರಾಗಿ, ತಮಿಳುನಾಡು ಏಕೀಕರಣಕ್ಕಾಗಿ ಹಲವಾರು ಜನ ಪ್ರಾಣ ತೆತ್ತ ಸ್ಥಳವಾದ ವಿದುರ ನಗರದಲ್ಲಿ ವಿಶೇಷವಾಗಿ ನಿರ್ಮಿಸಿದ ಕಾಂ. ಬಾಬು ಸೆಲ್ಲಿಯನ್ ಮಂಟಪದಲ್ಲಿ ತಮಿಳುನಾಡು ಡಿ.ವೈ.ಎಫ್.ಐ 4ನೇ ರಾಜ್ಯ ಸಮ್ಮೇಳನ ಮಾರ್ಚ್ 3,4,5 ರಂದು ನಡೆಯಿತು.

3ನೇ ತಾರೀಕಿನಂದು ಬೆಳಿಗ್ಗೆ 9 ಗಂಟೆಗೆ "ದೇಶಬಂಧು" ಮೈದಾನದಲ್ಲಿ ಹುತಾತ್ಮರಿಗೆ 528 ಪ್ರತಿನಿಧಿಗಳು ಶ್ರದ್ಧಾಂಜಲಿ ಅರ್ಪಿಸಿ, ದೇಶದ ಐಕ್ಯತೆ ಮತ್ತು ಸಮಗ್ರತೆ ಕಾಪಾಡುವುದಕ್ಕಾಗಿ ಪ್ರತಿಜ್ಞೆ ಮಾಡಿದರು. ಕಾ|| ಆರ್. ಕೃಷ್ಣನ್ ಧ್ವಜಾರೋಹಣ ಮಾಡಿದರು.

ಈ ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳನ್ನು ಕಾಂ. ಆರ್. ರಾಜು ಸ್ವಾಗತಿಸಿದರು. ಈ ಸಮ್ಮೇಳನದ ಉದ್ಘಾಟನೆಯನ್ನು ಸಿ.ಪಿ.ಐ [ಎಂ] ರಾಜ್ಯ ಕಾರ್ಯದರ್ಶಿ ಕಾಂ.ನಲ್ಲಶಿವನ್‌ರವರು ಮಾಡುತ್ತ ಭಾರತ ದೇಶಕ್ಕೆ ಒದಗಿರುವ ಅಪಾಯದ ಕುರಿತು ಯುವಜನರಿಗೆ ಎಚ್ಚರಿಸುತ್ತಾ, ಯುದ್ಧದ ಅಪಾಯದ ಬಗ್ಗೆ ಯುವ ಜನರಲ್ಲಿ ಅರಿವು ಮೂಡಿಸಿ ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗದ ಸಂಘಟನೆ ಬಲಪಡಿಸಬೇಕಾಗಿ ಕೇಳಿಕೊಂಡು ಯುವಕರ ಅನೇಕ ಹೋರಾಟಗಳನ್ನು ಸ್ಮರಿಸಿದರು.

ಡಿ.ವೈ.ಎಫ್.ಐ. ಅಖಿಲ ಭಾರತ ಕಾರ್ಯದರ್ಶಿಯವರಾದ ಕಾಂ. ಹನನ್ ಮುಲ್ಲಾ ಮಾತನಾಡುತ್ತಾ ದೇಶದಲ್ಲಿ ಪ. ಬಂಗಾಲ ಮತ್ತು ಕೇರಳ ಚುನಾವಣೆಗಳಿಂದುಂಟಾದ ರಾಜಕೀಯ ಬದಲಾವಣೆಯನ್ನ ವಿವರಿಸುತ್ತ ಡಿ.ವೈ. ಎಫ್.ಐ.ನ್ನು ಬಲಿಷ್ಠವಾಗಿ ಬೆಳೆಸಿ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ರೂಪಿಸುವಲ್ಲಿ ಮುಂದಾಗಬೇಕೆಂದು ಕರೆ ನೀಡಿದರು.

ಡಿ.ವೈ.ಎಫ್,ಐ.ನ ರಾಜ್ಯ ಅಧ್ಯಕ್ಷರಾದ ಕಾಂ. ನಣ್‌ಮಾರನ್‌ರವರು ಡಿ.ವೈ.ಎಫ್.ಐ. ಹೋರಾಟದ ಪರಂಪರೆಯನ್ನು ವಿವರಿಸಿದರು. ಕೊನೆಯ ದಿನ 25,000 ಯುವಕರ ಬೃಹತ್ ಮೆರವಣಿಗೆ ನಡೆದು ಬಹಿರಂಗ ಸಭೆ ನಡೆಯಿತು.

○

ಆಂಧ್ರ ಪ್ರದೇಶ :

"ಜನತಾ ಸೇವೆ, ವಿಶಾಲ ಚಳುವಳಿಗೆ ಮೀಸಲಿಡಿ"

ಸಿ.ಪಿ.ಐ. (ಎಂ) ಮಂಡಲಾಧ್ಯಕ್ಷರ ಶಿಬಿರವನ್ನು ಎರಡು ದಿನ ಆಂಧ್ರ ಪ್ರದೇಶದಲ್ಲಿ ನಡೆಸಲಾಯಿತು.

ಈ ಶಿಬಿರದ ಪ್ರಾರಂಭದಲ್ಲಿ ಸಿ.ಪಿ.ಐ [ಎಂ] ಆಂಧ್ರ ಜಿಲ್ಲಾ ಕಾರ್ಯದರ್ಶಿಯವರಾದ ಕಾಂ! ಲಾವು ಬಾಲಗಂಗಾಧರ ರಾವ್‌ರವರು ಮಾತನಾಡುತ್ತಾ. ಬಹಳ ಕಷ್ಟದ ಸಂದರ್ಭದಲ್ಲಿ ಕೂಡ 42 ಮಂಡಲಾಧ್ಯಕ್ಷರ ಸ್ಥಾನ ಪಡೆದಿರುವುದು ಕಡಿಮೆ ಏನಲ್ಲ. ದೇಶದ ಆರ್ಥಿಕ ರಾಜಕೀಯ, ತತ್ತರಿಸುತ್ತಿದೆ. ಕಾಂಗ್ರೆ ಕ್ಷೀಣಿಸುತ್ತಿದೆ, ಸಮಾಜವಾದಿಗಳು ಆಳುವ ವರ್ಗಗಳುಚುರುಕಿನಿಂದ ಕೆಲಸ ಮಾಡುತ್ತಿವೆ. ಕಾಂಗ್ರೆಯನ್ನು ಸೋಲಿಸಲು ತೆಲುಗುದೇಶಂ ನಂಥ ಪ್ರಜಾ ಪ್ರಭುತ್ವ ಶಕ್ತಿಗಳೊಂದಿಗೆ ಒಂದಾಗುವ ಅವಶ್ಯಕತೆ ನಮಗೆ ಬೇಕಾಗಿದೆ. ಕಾಂಗ್ರೆ ದೌರ್ಜನ್ಯಗಳನ್ನು ಭಗ್ನಗೊಳಿಸುವುದೇ ನಮ್ಮ ಮುಂದಿರುವ ಪ್ರಧಾನಕರ್ತವ್ಯ. ಆದ್ದರಿಂದ ನಾವು ತೆಗೆದುಕೊಂಡ ನಿರ್ಣಯ ಸರಿಯಾದಾದ್ದೆಂದು ಸ್ಪಷ್ಟವಾಗಿ ಹೇಳುತ್ತಿದ್ದೇವೆ ಸಿ.ಪಿ.ಐ. ಕಾಂಗ್ರೆಸಿನೊಂದಿಗೆ ಸೇರಿದ್ದರಿಂದ ಅನೇಕ ಸ್ಥಾನಗಳನ್ನುನಾವು ಕಳೆದುಕೊಂಡೆವು. ಸಿ. ಪಿ. ಐ. ನವರು ಸ್ವಂತ ತಾವು (?) 14 ಸ್ಥಾನಗಳನ್ನು ಗಳಿಸಿಕೊಂಡೆವು ಎನ್ನುತ್ತಿದ್ದಾರೆ ಅವರ 'ಸಾಹಸ'ವನ್ನು ನಾವು ಅಭಿನಂದಿಸಬೇಕಾಗಿದೆ ಎಂದರು. ನಮ್ಮ ಎಲ್ಲಾ ಕೆಲಸಗಳು ಜನ ಪರವಾಗಿ, ವಿಶಾಲ ಚಳುವಳಿಗೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾಗಿದೆಯೆಂದು ತಿಳಿಸಿದರು.

REG No. BGW-148 MAG (2) PRB DECR 319/78

ಚುನಾವಣೆಯಿಂದ ಕರ್ನಾಟಕಕ್ಕೂ ಲಾಭ

(1ನೇ ಪುಟದಿಂದ)

ರಕ್ಕೆ ಬಂದಿರುವುದರಿಂದ ಕರ್ನಾಟಕಕ್ಕೂ ಲಾಭವಿದೆ. ಅದನ್ನು ಪಡೆಯಲು ಎಲ್ಲರೂ ಶ್ರಮಿಸಬೇಕು.

ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಪ್ರಮಾಣ ವಚನ ಸ್ವೀಕರಿಸಿದ ತಕ್ಷಣವೇ ಕೇಂದ್ರ-ರಾಜ್ಯಗಳ ಸಂಬಂಧದ ಕುರಿತು ವರದಿ ಸಲ್ಲಿಸಲು ನೇಮಿಸಲ್ಪಟ್ಟ ಸರ್ಕಾರಿಯಾ ಕಮಿಶನ್ ತನ್ನ ವರದಿಯನ್ನು ಕೂಡಲೇ ಒಪ್ಪಿಸಬೇಕೆಂದು ಒತ್ತಾಯ ತರಲಾಗುವುದೆಂದು ಹೇಳಿದ್ದಾರೆ. ಸಿ.ಪಿ.ಐ.(ಎಂ) ಮತ್ತು ಪ. ಬಂಗಾಲ, ತ್ರಿಪುರಾ ಮುಖ್ಯಮಂತ್ರಿಗಳು ರಾಜ್ಯಗಳ ಬೆಳವಣಿಗೆಗೆ, ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಸರ್ಕಾರ ಹೆಚ್ಚು ಸಂಪನ್ಮೂಲ ಒದಗಿಸಬೇಕೆಂದು ಒತ್ತಾಯಿಸುತ್ತ ಬಂದಿದ್ದರು. ಕೇಂದ್ರ-ರಾಜ್ಯಗಳಲ್ಲಿಯ ಸಂಪತ್ತನ್ನು ದೋಚಿಕೊಂಡು ಅವುಗಳನ್ನು ಕಡೆಗಣಿಸುತ್ತದೆಂದು ಆರೋಪಿಸುತ್ತಲೇ ಬಂದಿದ್ದರು. ಎರಡೇ ರಾಜ್ಯಗಳ ಮುಖ್ಯಮಂತ್ರಿಗಳ ಕೂಗು ಕೇಂದ್ರದ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದಿಲ್ಲ. ಆದರೆ 1983ರಲ್ಲಿ ಕರ್ನಾಟಕ, ಆಂಧ್ರ, ಪಾಂಡಿಚೇರಿ, ಜಮ್ಮು-ಕಾಶ್ಮೀರಗಳು ಕಾಂಗ್ರೆಸ್ಸ್ ಕೈಬಿಟ್ಟಾಗ, ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೂ ಜ್ಯೋತಿ ಬಸು ಅವರೊಡನೆ ಸೇರಿ, ಕಾಂಗ್ರೆಯೇತರ ಮುಖ್ಯಮಂತ್ರಿಗಳ ಸಭೆ ಸೇರಿಸಿ, ಕೇಂದ್ರದ ಮೇಲೆ ಒತ್ತಾಯ ತಂದಾಗ, ಅಂದಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಸರ್ಕಾರಿಯಾ ಕಮಿಶನ್ ನೇಮಿಸಿದ್ದರು. ದೇಶಾದ್ಯಂತ ತಿರುಗಾಡಿ ಸರ್ಕಾರಿಯಾ ಕಮಿಶನ್ ಸಾಕಷ್ಟು ಮಾಹಿತಿ ಸಂಗ್ರಹಿಸಿದೆ. ಪ್ರಾರಂಭದಲ್ಲಿ ಕಾಂಗ್ರೆಯೇತರ ಮುಖ್ಯಮಂತ್ರಿಗಳನ್ನು ಸೇರಿಸಿ, ರಾಜ್ಯಗಳಿಗೆ ಹೆಚ್ಚು ಧನಸಹಾಯ ಸಿಗಬೇಕೆಂಬ ಬೇಡಿಕೆಗಳಿಗಾಗಿ ಕೇಂದ್ರದ ಮೇಲೆ ಒತ್ತಾಯ ತರಲು ಸಾಕಷ್ಟು ಉತ್ಸಾಹದಿಂದಲೇ ದುಡಿದ ರಾಮಕೃಷ್ಣ ಹೆಗಡೆ ಬರಬರುತ್ತ ಹಿಂಜರಿತ ಪ್ರಾರಂಭಿಸಿದರು. ದಿಲ್ಲಿ ರಾಜಕಾರಣದತ್ತ ಧುಮುಕಲು ಹವಣಿಸಿದರು ರಾಮಕೃಷ್ಣ ಹೆಗಡೆಯವರು. ಸರ್ಕಾರಿಯಾ ಕಮಿಶನ್ನಿನ ವಿಷಯದಲ್ಲಾಗಲೀ, ಕೇಂದ್ರದಿಂದ ರಾಜ್ಯಗಳಿಗೆ ಸಲ್ಲತಕ್ಕ ಸಂಪನ್ಮೂಲಗಳ ವಿಷಯದಲ್ಲೇ ಆಗಲಿ, ಅಥವಾ ಸಾಮಾನ್ಯ ಜನರನ್ನೂ, ಅಲ್ಪಮತಸ್ಥರನ್ನೂ ಎದುರಿಸುತ್ತಿರುವ ವಿಷಯಗಳಲ್ಲೇ ಆಗಲೀ 1983 ರಲ್ಲಿ ಪ್ರಾರಂಭಿಸಿದ್ದ ಕೇಂದ್ರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವುದರಲ್ಲಿ ಹೆಗಡೆಯವರು ಹಿಂದೇಟು ಹಾಕಿದರು. ರಾಜೀವ್ ಗಾಂಧಿಯವರ ಜೊತೆಯಲ್ಲಿ ನಿಕಟ ಸ್ನೇಹ ಸಂಬಂಧ ಬೆಳೆದಿದೆ ಎಂಬ ಮಟ್ಟಿಕ್ಕೂ ಹೆಗಡೆ ವರ್ತನೆ ಸಂಶಯಕ್ಕೆಡೆ ಮಾಡಿತ್ತು.

ಕರ್ನಾಟಕದ ಬೆಳವಣಿಗೆಗೆ ಅತ್ಯಾವಶ್ಯಕವಾಗ ಬೇಕಾದ, ವಿಜಯನಗರ ಉಕ್ಕಿನ ಕಾರ್ಖಾನೆ ಕರಾವಳಿ ರೈಲ್ವೆ, ಮಂಗಳೂರು ತೈಲಾಗಾರಗಳ ಪರವಾಗಿಯೂ, ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ, ಮಲಪ್ರಭಾ ಮೊದಲಾದ ನೀರಾವರಿ ಯೋಜನೆಗಳಿಗಾಗಿ ಹೆಚ್ಚು ಧನಸಹಾಯ ಮಾಡುವಂತೆ ಕೇಂದ್ರದ ಮೇಲೆ ಒತ್ತಾಯಿಸಲು ಪ. ಬಂಗಾಲದಂತೆಯೇ ಎಲ್ಲ ವಿರೋಧ ಪಕ್ಷಗಳ, ಜನವಿಭಾಗದ ಬೆಂಬಲ-ಸಹಕಾರದಿಂದ ಚಳುವಳಿ ಪ್ರಾರಂಭಿಸಬೇಕೆಂದು ಸಿ.ಪಿ.ಐ.(ಎಂ) ಒತ್ತಾಯ ಮಾಡಿದರೂ ಕೂಡ ಹೆಗಡೆ ಅದಕ್ಕೆ ತಯಾರಾಗಲಿಲ್ಲ. ಅಸ್ಸಾಂ. ಪಂಜಾಬ್, ಸಮಸ್ಯೆಗಳ ಕುರಿತು, ಸಹಬಾನು ಖಟ್ಲೆ, ಏಕರೂಪದ ನಾಗರಿಕ ಸಂಹಿತೆ, ಬಬ್ರಿಮಸ್‌ಜೀದ-ರಾಮಜನ್ಮಭೂಮಿ ಮೊದಲಾದ ದೇಶದ ಜನಜೀವನದ ಮೇಲೆ ಪರಿಣಾಮ ಬೀರುವಂಥ ಸಮಸ್ಯೆಗಳ ವಿಷಯದಲ್ಲಿ, ಗಡಿ ಸಮಸ್ಯೆಯ ಕುರಿತು, ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಜಾತ್ಯಾತೀತ ವಿರೋಧ ಪಕ್ಷಗಳ ಐಕ್ಯ ಚಳುವಳಿ ಕುರಿತಾಗಲೀ ಹೆಗಡೆಯವರಿಗೂ, ಜನತ ಮುಖಂಡರಿಗೂ ನಿರ್ದಿಷ್ಟ ನಿಲುವೆ ಎಂಬುದೇ ಇಲ್ಲವಾಗಿತ್ತು. ಅಂಥ ಸಮಸ್ಯೆಗಳ ಕುರಿತು ಜನತಾ ಮುಖಂಡತ್ವ ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿತ್ತು. ಈಗಲೂ ಅದನ್ನೇ ಮಾಡುತ್ತಿದೆ. ಆ ಕಾರಣದಿಂದಾಗಿ 1983 ರಲ್ಲಿ ಪ್ರಾರಂಭಿಸಿದ ಕಾಂಗ್ರೆಯೇತರ ಮುಖ್ಯಮಂತ್ರಿಗಳೂ, ವಿರೋಧ ಪಕ್ಷಗಳೂ ಸೇರಿ ನಿರ್ಣಯಿಸಿದ ಕನಿಷ್ಟ ಕಾರ್ಯಕ್ರಮಗಳ ಮೇಲಿನ ಚಳುವಳಿಯನ್ನು ಮುಂದಕ್ಕೊಯ್ಯಲು ಸಾಧ್ಯವಾಗಲಿಲ್ಲ. ಹೆಗಡೆಯವರು ಅದರ ಕಡೆ ಇದ್ದ ಗಮನವನ್ನು ಬೇರೆಡೆ ಹರಿಸಿ ಬಿಟ್ಟಿದ್ದರು. ಶರದ್ ಪವಾರ್, ಡಾ। ಫರೂಕ್ ಅಬ್ದುಲ್ಲಾ ಅವರನ್ನು ರಾಜೀವಗಾಂಧಿ ತನ್ನೆಡೆ ಎಳಕೊಂಡಾಗ ಹೆಗಡೆಯವರಿಗೂ ಮಿಜಿಮಿಜಿ ಆಗಿರಬೇಕು. ಚಂಚಲತೆಯ ಅಲೆಗಳಲ್ಲಿ ಹೆಗಡೆಯವರು ಮುಳುಗುತ್ತಿದ್ದಾಗ, ಪಶ್ಚಿಮ ಬಂಗಾಲ-ಕೇರಳಗಳ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ಆ ಫಲಿತಾಂಶ ಹೆಗಡೆಯವರ ಮೇಲೆ ಮಾತ್ರವಲ್ಲ, ಜನತಾ ಪಕ್ಷದ ಮುಖಂಡರ ಮೇಲ ಒಳ್ಳೆ ಪರಿಣಾಮ ಬೀರಿದೆ. ಸಿ.ಪಿ.ಐ. [ಎಂ.] ಮುಖಂಡತ್ವದ 3 ಸರಕಾರಗಳು, ಕರ್ನಾಟಕ, ಆಂದ್ರ, ಪಂಜಾಬ, ಅಸ್ಸಾಂಗಳಲ್ಲಿಯ ಕಾಂಗ್ರೆಏತರ ಸರಕಾರಗಳು, ಕೇಂದ್ರದ ಅನ್ಯಾಯದ ವಿರುದ್ಧ ಹೋರಾಡಲು ಒಂದೇ ಮುಚದಲ್ಲಿ ಸೇರಿಕೊಳ್ಳಬಹುದಾಗಿದೆ. ಮಿಜೋರಾಂ, ಮೇಘಾಲಯ, ಜಮ್ಮು ಕಾಶ್ಮೀರ, ತಮಿಳುನಾಡುಗಳಲ್ಲಿ ಕೂಡಾ ಕೇಂದ್ರ ಸರಕಾರದ ನೀತಿಯ ವಿರುದ್ಧ ಜನಾಭಿಪ್ರಾಯ ಪ್ರಭಲವಾಗಿ ಮೂಡಿ ಬರುತ್ತಿದೆ. ಇಂಥ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರು 1983ರಲ್ಲಿ ಮಾಡಿದಂತೆಯೇ ಎಲ್ಲಾ ಕಾಂಗ್ರೆಯೇತರ ಮುಖ್ಯಮಂತ್ರಿಗಳ ಬಲಿಷ್ಟ ಒಕ್ಕೂಟ ಸಾಧಿಸುವುದಕ್ಕೆ ಜ್ಯೋತಿ ಬಸು ಅವರಿಗೆ ಸಹಾಯ ಮಾಡಿದರೆ, ದೇಶದ ರಾಜಕೀಯದಲ್ಲಿ ಬಹಳಷ್ಟು ಬದಲಾವಣೆ ಉಂಟಾಗಲು ಸಾಧ್ಯ. ರಾಜ್ಯಗಳ ಕುರಿತು ಕೇಂದ್ರದ ನಿಲುವೆಯಲ್ಲಿ ಬದಲಾವಣೆಯಾಗಲೂ ಸಾಧ್ಯ. ರಾಜ್ಯಗಳಿಗೆ ಕೇಂದ್ರದಿಂದ 'ಸಲ್ಲತಕ್ಕಸಂಪನ್ಮೂಲಗಳು ಸುಲಭದಲ್ಲಿ ಹರಿದುಬರುವಂತಾಗಲೂ ಸಾಧ್ಯ. ಅದೆಲ್ಲ ಸಾಧಿಸಬೇಕಾದರೆ ಹೆಗ್ಡೆಯವರು ಹಾಗೆಯೇ ಜನತಾ ಪಕ್ಷ ಸ್ಪಷ್ಟ, ದೃಢ ನಿಲುವೆ ತಾಳುವುದು ಅತ್ಯಗತ್ಯ.

ಈಗಂತೂ ಹೆಗಡೆಯವರೂ, ಜನತಾ ಪಕ್ಷದ ಅಖಿಲ ಭಾರತ ಮುಖಂಡರೂ, ಎರಡೂ ರಾಜ್ಯಗಳ ವಿಜಯವನ್ನು ಜ್ಯೋತಿ ಬಸು ಅವರ ಹೇಳಿಕೆಯನ್ನು ಸ್ವಾಗತಿಸಿದ್ದಾರೆ. ಅದನ್ನು ಯಾವರೀತಿ ಕಾರ್ಯಾಚರಣೆಯಲ್ಲಿ ತರುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ.

1983 ಕ್ಕಿಂತಲೂ ಒಳ್ಳೆ ಅವಕಾಶ ಈಗ ಸಿಕ್ಕಿದೆ. ಕಾಂಗ್ರೆಯೇತರ ಮಂತ್ರಿಮಂಡಲಗಳ ಸಂಖ್ಯೆ ಹೆಚ್ಚಾಗಿದೆ. 24 ರಾಜ್ಯಗಳ ಪೈಕಿ ಕಾಂಗ್ರೆ ಆಳುತ್ತಿರುವುದು 13 ರಾಜ್ಯಗಳಲ್ಲಿ ಮಾತ್ರ. ಇಂಥ ಒಳ್ಳೆಸಂದರ್ಭವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವ ಚಾಣಕ್ಷತನ ಬೇಕು. ಹೆಗಡೆಯವರು ದೃಢ ನಿಲುವೆ ತಾಳಬೇಕು, ಎಡ ಜಾತ್ಯಾತೀತ ಪಕ್ಷ ಪಂಗಡಗಳನ್ನೂ ರೈತ-ಕಾರ್ಮಿಕ ವರ್ಗವನ್ನೂ, ಯುವಜನತೆಯನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

ಎರಡೂ ರಾಜ್ಯಗಳ ಚುನಾವಣೆಗಳ ಫಲಿತಾಂಶದಿಂದ ಸ್ಫೂರ್ತಿಗೊಂಡ ಕರ್ನಾಟಕ ಜನತೆ ತಮ್ಮ ರಾಜ್ಯದಲ್ಲಿಯೂ ಎಡ ಶಕ್ತಿಗಳನ್ನೂ, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಸಂಘಟಿಸಲು ಮುಂದಾಗಬೇಕು. ಹೆಗಡೆಯವರು ಕೇಂದ್ರದ ವಿರುದ್ಧ ಹೋರಾಡುವಂತೆ ಅಂಥ ಹೋರಾಟ ಕೈಗೊಳ್ಳುವಂತೆ ಜನತಾ ಪಕ್ಷ ಮತ್ತು ರಾಮಕೃಷ್ಣ ಹೆಗಡೆಯವರ ಮೇಲೆ ಒತ್ತಾಯ ತರಬೇಕು. ಕೇಂದ್ರದ ವಿರುದ್ಧ ಹೋರಾಟಕ್ಕೆ ಹೊಸ ಸ್ಫೂರ್ತಿ ನೀಡಿದಂತಾಗಿದೆ. ಅದನ್ನು ಪಯೋಗಿಸಿಕೊಂಡು ಕರ್ನಾಟಕದ ಭವಿಷ್ಯತ್ತಿಗಾಗಿ ದುಡಿಯೋಣ.

ಮೇ ದಿನದ ವಿಶೇಷಾಂಕ

ಐಕ್ಯರಂಗದ ಮೇ ದಿನಾಚರಣೆಯ ವಿಶೇಷಾಂಕವನ್ನು ಪ್ರತಿವರ್ಷದಂತೆ ಈಸಲವೂ ಸಕಾಲದಲ್ಲಿ ಹೊರಡಿಸುವ ಪ್ರಯತ್ನ ನಡೆದಿದೆ. ಬೆಲೆ ರೂ.3- ಹೆಚ್ಚಿನ ಪ್ರತಿಗಾಗಿ ಬರೆಯಿರಿ.

ಈ ವಾರ....

★ ಮೂಲಭೂತ ವಾದಿಗಳಿಂದ ನಿರೀಕ್ಷಿಸಬಹುದಾದ ನಿಲುವು ಜಾತ್ಯಾತೀತ ಹಾಗೂ ಪುರೋಗಾಮಿ ನೀತಿ ಅಂಗೀಕರಿಸಿ ಒಮ್ಮೆ ಕೇಂದ್ರ ಸರ್ಕಾರವನ್ನು ನಡೆಸಿದ್ದ ಜನತಾದಂತಹ ಪಕ್ಷದ ಸಂಸತ್ತಿನ ಹಿರಿಯ ಸದಸ್ಯರೊಬ್ಬರಿಂದ ಕೇಳಿ ಬರುತ್ತಿರುವುದು ವಿರೋಧಭಾಸ. ಇಷ್ಟೇ ಮೂಲಭೂತ ವಾದದ ಸಮರ್ಥನೆ ಮಾಡುವವರು ಆಡಳಿತ ಪಕ್ಷದಲ್ಲಿಲ್ಲ ವೆಂದಲ್ಲ........ ಪಂಜಾಬಿನಲ್ಲಿನಂತಹ ಧರ್ಮ-ರಾಜಕೀಯದ ಸಮಸ್ಯೆ ಎದುರಿಸುವಾಗ ಕಮ್ಯೂನಿಸ್ಟ್ ಪಕ್ಷಗಳು ಅನುಸರಿಸುತ್ತಿರುವ ದಾರಿ ಗಮನಾರ್ಹ. ಇದನ್ನು ಆ ರಾಜ್ಯದ ಪೋಲೀಸ್ ಮುಖ್ಯಸ್ಥ ರೆಜಿರೋ ಅವರಲ್ಲದೆ ಮೊನ್ನೆಯಷ್ಟೇ ಕಾಂಗ್ರೆಯವರಾದ ಸಚಿವ ಚಿದಬಂರಂ ಅವರು ಸದನದಲ್ಲೇ ಶ್ಲಾಘಿಸಿದ್ದಾರೆ.

-ಪ್ರಜಾವಾಣಿ, ಎ.7

★ ಕೇರಳದಲ್ಲಿ ಎಡರಂಗ ಸರ್ಕಾರ ವಿರೋಧ ಪಕ್ಷವನ್ನು ಕೆಣಕುವ ಅಲ್ಪ ಉದ್ದೇಶದಿಂದ ಯಾವ ಆತುರಾತುರ ಕ್ರಮಕ್ಕೈಗೊಳ್ಳದಿರುವುದು ರಾಜ್ಯದ ರಾಜಕೀಯ ವೀಕ್ಷಕರಿಗೆ ಹರ್ಷವುಂಟುಮಾಡಿದೆ. ಆದರೆ ವಿರೋಧ ಪಕ್ಷವನ್ನು ಚುಚ್ಚುತ್ತಿರುವುದುಇದೆ. ಆದ್ದರಿಂದಲೇ ಕರುಣಾಕರನ್ ಮೊದಲಾದ ಪ್ರಸಿದ್ಧ ವ್ಯಕ್ತಿಗಳಿಂದ ಕೂಡಿದಕ್ಕೆವಿರೋಧ ಪಕ್ಷ ಸದಾ ತಾಂತ್ರಿಕ ಲೋಪಗಳನ್ನೆತ್ತಿ ಕಲಾಪಗಳಲ್ಲಿ ಅಡ್ಡಿ ಉಂಟುಮಾಡಲು ಕಾನೂನು-ವ್ಯವಸ್ಥೆಯ ಬೊಬ್ಬೆಯೆಬ್ಬಿಸಲು ಪ್ರಯತ್ನಿಸಿತು.

-ಡೆಕ್ಕನ್ ಹೆರಾಲ್ಡ್‌ನಲ್ಲಿ ವರದಿ, ಏ.8

★ 16ರಿಂದ 24 ವರ್ಷ ವಯಸ್ಸಿನ ಹಲವಾರು ಅಮೇರಿಕನ್ನರು ದಿನಕ್ಕೆ 14ರಿಂದ 16 ಗಂಟೆಗಳ, ವಾರದಲ್ಲಿ ಏಳು ದಿನ ಸರಿಯಾದ ಆಹಾರ ವಿಲ್ಲದೆ, ವೈದ್ಯಕೀಯ ರಕ್ಷಣೆ ಎಂಬುದೇ ಇಲ್ಲವೆನ್ನ'ಬಹುದಾದ ಪರಿಸ್ಥಿತಿಯಲ್ಲಿ, ತಮ್ಮ ವೈಯಕ್ತಿಕ ಜೀವನ ರೂಪಿಸುವ ಅವಕಾಶವಿಲ್ಲದೆ ದುಡಿಯುತ್ತಿರಬೇಕಾಗಿದೆ ಎಂದು "ಪೇರೆಂಟ್ ವಾಚ್" ಸಂಸ್ಥೆಯ ನಿರ್ದೇಶಕರು ಅಮೇರಿಕನ್ ಖಾಯಂ ತನಿಖಾ ಉಪಸಮಿತಿಯ ಮುಂದೆ ಸಾಕ್ಷ್ಯ ನುಡಿದಿದ್ದಾರೆ.

ಕ್ಸಿನ್ ಹುವಾ ಸುದ್ದಿ, ಎ.8

★ ಪಶ್ಚಿಮ ಬಂಗಾಲ ಪಿ.ಸಿ.ಸಿ. (ಐ) ಕಚೇರಿಯಲ್ಲಿ ಎರಡು ಕಾಂಗ್ರೆಸ್ (ಐ) ಗುಂಪುಗಳ ನಡುವೆ ಇಪ್ಪತ್ತು ನಿಮಿಷಗಳಿಗೂ ಹೆಚ್ಚು ಸಮಯ ನಡೆದ ಘರ್ಷಣೆಯಲ್ಲಿ ಸೋಡಾ ಬಾಟಲುಗಳ, ಕಲ್ಲುಗಳ ತೂರಾಟ ನಡೆದು ಕಛೇರಿಯ ಕಿಟಕಿ ಗಾಜುಗಳು ಪುಡಿಪುಡಿಯಾದವು. ಬಾಗಿಲುಗಳನ್ನು ಮುರಿಯುವ ಪ್ರಯತ್ನ ನಡೆಯಿತು. ಅಧ್ಯಕ್ಷರ ಕೊಠಡಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಪಿ.ಸಿ.ಸಿ. (ಐ) ಪ್ರಧಾನ ಕಾರ್ಯದರ್ಶಿ ಹಾಗೂ ಪತ್ರಿಕಾ ವರದಿಗಾರರು ಪೋಲೀಸ್ ನೆರವು ಕೋರಬೇಕಾಗಿ ಬಂತು.

-ಎಕ್ಸ್ ಪ್ರೆಸ್ ನ್ಯೂಸ್ ಸರ್ವಿಸ್, ಎ.9

★ ಕೇವಲ "ತೇಜೋವಧೆಜೆ"ಗಾಗಿ ಮಾಡುವ (ಟೇಪ್ ಹಗರಣದಂತಹ) ಅಪಾದನೆಗಳು ನಿಲ್ಲಬೇಕೆಂದು ಹಿರಿಯ ಕಾಂಗ್ರೆ ಸದಸ್ಯ ಭಗವತ್ ಝಾ ಆಜಾದ್ ಲೋಕಸಭೆ ಮಾಡಿರುವ ಒತ್ತಾಯ ಸಮರ್ಥನೀಯ. ಆದರೆ ಇದು ಮುಖ್ಯವಾಗಿ ಕಾಂಗ್ರೆಯೇತರ ರಾಜ್ಯಗಳಲ್ಲಿ ಹಾಗೂ ಚುನಾವಣೆ ಸಮಯಗಳಲ್ಲಿ ಕಾಂಗ್ರೆ ನಾಯಕರೇ ಸ್ವತಃ ಅನುಸರಿಸಬೇಕಾದ ಶಿಷ್ಟಾಚಾರ.

-ಪ್ರಜಾವಾಣಿ, ಎ. 10

ಬೇಡಿಕೆ ಈಡೇರಿಕೆಗೆ ಸ್ವಾಗತ

ಎಸ್.ಎಫ್.ಐ. ತುಮಕೂರು ಶಾಖೆಯು ತಾ 16-3-87ನೇ ಸೋಮವಾರ ಗೊಲ್ಲರ (ಯಾದವ) ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಬೇಡಿಕೆಯ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಬಿ.ಸಿ.ಎಮ್. ಆಫೀಸರುಗಳಿಗೆ ಮನವಿ ಸಲ್ಲಿಸಿತ್ತು.

ತಾ: 21-3-87ನೇ ಶನಿವಾರ ಜಿಲ್ಲಾ ಪರಿಷತ್ ಅಧ್ಯಕ್ಷರು, ಬಿ.ಸಿ.ಎಮ್. ಅಧಿಕಾರಿಗಳು ಏಪ್ರಿಲ್ ತಿಂಗಳಲ್ಲಿ ಹಾಸ್ಟೆಲ್ ನಡೆಸುತ್ತೇವೆಂದು ವಿದ್ಯಾರ್ಥಿಗಳಿಗೆ ಹೇಳಿಕೆ ನೀಡಿದರು. ಇದನ್ನು ಎಸ್.ಎಫ್.ಐ ಸ್ವಾಗತಿಸುತ್ತಾ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಲೆಂದು ಹಾರೈಸುತ್ತದೆ.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P· RamachandraRao
Managing Editor : N. K. Upadhyaya